

# ಜೀವನದ ರಾತ್ರಿಯ ಸಮಯಗಳು

ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಜೂನ್ 2017

ಪುನರ್ ಪರಿಶೀಲಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫೈಯ್ಥ್ ಡಿಸೈನ್ಸ್

**Contact Information:**
All Peoples Church & World Outreach
# 7M-319, 2nd Floor, 2nd Block,
HRBR Layout, Kalyan Nagar, Bangalore 560 043
Karnataka, INDIA

Phone: +91-80-2354 4328, Extn. 35
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - The Night Seasons of Life)

# ಜೀವನದ ರಾತ್ರಿಯ ಸಮಯಗಳು

# ವಿಷಯಸೂಚಿ


| | | |
|---|---|---|
| 1. | ಜೀವನದ ಸಮಯಗಳು | 1 |
| 2. | ಜೀವನದ ರಾತ್ರಿಯ ಸಮಯಗಳು | 5 |
| 3. | ರಾತ್ರಿಯು ಎಲ್ಲಿಂದ ಬರುತ್ತದೆ? | 7 |
| 4. | ರಾತ್ರಿಯು ಏಕೆ ಬರುತ್ತದೆ? | 15 |
| 5. | ಎಲ್ಲವೂ ಕತ್ತಲಾದಾಗ ದೇವರು ಎಲ್ಲಿದ್ದಾನೆ? | 20 |
| 6. | ನಾವು ಮಧ್ಯರಾತ್ರಿಯಲ್ಲಿ ಏನು ಮಾಡುತ್ತೇವೆ? | 22 |
| 7. | ನನ್ನ ಬೆಳಿಗ್ಗೆ ಯಾವಾಗ ಉದಯವಾಗುವುದು? | 30 |

# 1

# ಜೀವನದ ಸಮಯಗಳು

ಜೀವನ ಒಂದು ಪ್ರಯಾಣ - ಅನೇಕ ಹಂತಗಳುಳ್ಳ ಒಂದು ಪ್ರಯಾಣ! ಕಾಲದಲ್ಲಿ ಒಮ್ಮೆ ಶಿಶುಗಳಾಗಿದ್ದ ನಾವೆಲ್ಲರೂ, ಮಕ್ಕಳಾಗಿ ಬೆಳೆದವು. ಬಳಿಕ ಕೊನೆಯಿಲ್ಲವೋ ಎಂಬಂತೆ ಕಂಡ, ಆ ನವಯೌವ್ವನದ ವರ್ಷಗಳನ್ನು ತಲುಪಿದೆವು! ಬಳಿಕ ಪ್ರೌಢಾವಸ್ಥೆ ಬಂತು. ನಮ್ಮಲ್ಲನೇಕರು ಮದುವೆಯಾಗಿ ಈಗ ನಮಗೆ ಮಕ್ಕಳಿದ್ದಾರೆ. ಈ ಮಕ್ಕಳು ಬಳಿಕ ಬೆಳೆದು ದೊಡ್ಡವರಾಗಿ ಮನೆಯನ್ನು ಬಿಟ್ಟು ಹೋಗುವರು ಮತ್ತು ನಾವು ಜೀವನದ ಇತರ ಹಂತಗಳಿಗೆ ಮುಂದುವರಿಯುವೆವು. ಹಾಗಿದ್ದಾಗ್ಯೂ, ಜೀವನದ ಪ್ರತಿಯೊಂದು ಹಂತದಲ್ಲೂ, ವಿವಿಧ ಸಮಯಗಳಿವೆ. ನಮ್ಮ ಬಾಲ್ಯದ ವರ್ಷಗಳನ್ನು ಜ್ಞಾಪಿಸಿಕೊಂಡರೆ, ನಮ್ಮಲ್ಲನೇಕರಿಗೆ ಸಂತೋಷ ಮತ್ತು ಐಸ್‌ಕ್ರೀಮ್‌ಗಳ ಅನೇಕ ಸವಿ ನೆನಪುಗಳಿವೆ! ಇನ್ನು ಕೆಲವರಿಗೆ, ನಮ್ಮ ಬಾಲ್ಯದ ನೆನಪುಗಳು ಹೋರಾಟ ಮತ್ತು ಕೊರತೆಗಳಿಂದ ತುಂಬಿದ್ದು ತಂಟೆಗಳಿಂದ ನಿಟ್ಟುಸಿರು ತರುವುದು.

## ಜೀವನದ ಸಮಯಗಳು

ಜೀವನವು ಸಮಯಗಳಲ್ಲಿ ನಡೆಯುವಂತೆ ದೇವರು ಅದನ್ನು ರೂಪಿಸಿದ್ದಾನೆ ಎಂದು ನಾವು ತಿಳಿದುಕೊಳ್ಳಬೇಕು. ನಾವು ಜೀವನದ ವಿವಿಧ ಸಮಯಗಳನ್ನು ಹಾದು ಹೋಗುತ್ತೇವೆ. ನಮ್ಮ ಜೀವನದ ಸಮಯಗಳು ಬದಲಾಗುತ್ತ ಹೋಗುತ್ತವೆ. ಪ್ರಸಂಗಿಯ ಪುಸ್ತಕವು ಈ ಸತ್ಯವನ್ನು ಸ್ಪಷ್ಟವಾಗಿ ನಮ್ಮ ಮುಂದಿಡುತ್ತದೆ.

**''ಪ್ರತಿಯೊಂದು ಕಾರ್ಯಕ್ಕೂ ಕಾಲವು ಕ್ಲುಪ್ತವಾಗಿದೆ; ಆಕಾಶದ ಕೆಳಗೆ ನಡೆಯುವ ಒಂದೊಂದು ಕೆಲಸಕ್ಕೂ ತಕ್ಕ ಸಮಯವುಂಟು.''** (ಪ್ರಸಂಗಿ 3:1)

**''ಒಂದೊಂದು ವಸ್ತುವನ್ನು ಸಮಯಕ್ಕೆ ತಕ್ಕ ಹಾಗೆ ಅಂದವಾಗಿ ನಿರ್ಮಿಸಿದ್ದಾನೆ; ಇದಲ್ಲದೆ ಮನುಷ್ಯರ ಹೃದಯದಲ್ಲಿ ಅನಂತಕಾಲದ ಯೋಚನೆಯನ್ನು ಇಟ್ಟಿದ್ದಾನೆ; ಆದರೂ ದೇವರು ಆದ್ಯಂತವಾಗಿ ನಡೆಸುತ್ತಿರುವ ಕೆಲಸವನ್ನು ಅವರು ಗ್ರಹಿಸಲಾರದಂತೆ ಮಾಡಿದ್ದಾನೆ.''** (ಪ್ರಸಂಗಿ 3:11)

ದೇವರು ವಿಚಾರವಿಲ್ಲದೆ ಕೆಲಸ ಮಾಡುವುದಿಲ್ಲವೆಂದು ನಾವು ಗ್ರಹಿಸತಕ್ಕದ್ದು. ಆತನು ಯಾವುದಾದರೊಂದನ್ನು ಫಕ್ಕನೆ ಅವ್ಯೆಚಾರಿಕವಾಗಿ ಕಾರ್ಯರೂಪಕ್ಕೆ ತರಲು

ನಿರ್ಧರಿಸುವುದಿಲ್ಲ. ದೇವರು 'ಕಾಲಗಳಿಗೆ' ಮತ್ತು 'ಸಮಯಗಳಿಗೆ' ಅನುಸಾರವಾಗಿ ಕೆಲಸ ಮಾಡುತ್ತಾನೆ. ಯೇಸು ಪರಲೋಕಕ್ಕೆ ಏರಿಹೋಗಲಿದ್ದಾಗ, ಆತನು ಅದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸಿಕೊಡುವನೋ ಎಂದು ಆತನ ಶಿಷ್ಯರು ತಿಳಿಯಲು ಅಪೇಕ್ಷಿಸಿದರು. ಅವರು ಆತನನ್ನು, ''ಸ್ವಾಮಿ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸಿಕೊಡುವಿಯೋ?'' ಎಂದು ಕೇಳಿದರು. ಆತನು ಅವರಿಗೆ, ''ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನು (ಕ್ರೋನೋಸ್) ಸಮಯಗಳನ್ನೂ (ಕೈರೋಸ್) ತಿಳಿದುಕೊಳ್ಳುವುದು ನಿಮ್ಮ ಕೆಲಸವಲ್ಲ'' ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 1:6:7). ತಂದೆಯು ಕಾಲಗಳನ್ನೂ ಸಮಯಗಳನ್ನೂ ತನ್ನ ಅಧಿಕಾರದಲ್ಲಿಟ್ಟುಕೊಂಡಿದ್ದಾನೆ.

## 'ಕ್ರೋನೋಸ್' ಮತ್ತು 'ಕೈರೋಸ್'

ಕಾಲವನ್ನು ಸೂಚಿಸುವ ಎರಡು ಗ್ರೀಕ್ ಪದಗಳಿವೆ. 'ಕ್ರೋನೋಸ್' ಎಂಬ ಪದವು 'ಕಾಲಾವಧಿ' ಅಥವಾ 'ಪಂಚಾಂಗದ' ಕಾಲವನ್ನು ಮತ್ತು 'ಕೈರೋಸ್' ಎಂಬ ಪದವು 'ಕ್ಲುಪ್ತ ಕಾಲ' ಅಥವಾ 'ತಕ್ಕ ಕಾಲ'ವನ್ನು ಅಥವಾ ತಕ್ಕಂತೆ ಗೊತ್ತುಮಾಡಿದ ಕಾಲ ಅಥವಾ ಪ್ರಾಪ್ತಕಾಲವನ್ನು ಹೇಳುತ್ತದೆ. ದೇವರು ಕಾಲಾವಧಿಯನ್ನು (ಕ್ರೋನೋಸ್‌ನ್ನು) ಮತ್ತು ಕ್ಲುಪ್ತಕಾಲವನ್ನು (ಕೈರೋಸ್‌ನ್ನು) ತನ್ನ ಕೈಯಲ್ಲಿಟ್ಟುಕೊಂಡಿದ್ದಾನೆ.

ಇದು ಪರಿಶುದ್ಧ ಗ್ರಂಥಗಳಲ್ಲಿ ತಕ್ಕ ರೀತಿಯಲ್ಲಿ ನಿದರ್ಶಿಸಲ್ಪಟ್ಟಿದೆ. ''ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು... ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ... ಕಳುಹಿಸಿಕೊಟ್ಟನು'' (ಗಲಾತ್ಯದವರಿಗೆ 4:4). ದೇವರು ಮನುಷ್ಯನನ್ನು ತನಗೆ ಸಂಧಾನಪಡಿಸಿಕೊಳ್ಳಲು ತನ್ನ ಮಗನನ್ನು ಕಳುಹಿಸಿದನು. ಪರಿಪೂರ್ಣ ಕಾಲದ, ಕ್ರೋನೋಸ್‌ನ, ಬಳಿಕ ಸಮಯವು ಕೈರೋಸ್, ಬರುತ್ತದೆ. 'ಕಾಲಾವಧಿಯು' ಪೂರ್ಣವಾದಾಗ, 'ಕ್ಲುಪ್ತಕಾಲವು' ಬರುತ್ತದೆ. ''ಕಾಲದ ಪರಿಪೂರ್ಣತೆಯಲ್ಲಿ,'' ದೇವರು ತನ್ನ ಮಗನನ್ನು ಕಳುಹಿಸಿದನು. ಇದು ದೇವರು ಕೆಲಸ ಮಾಡುವ ರೀತಿಯಾಗಿದೆ. ಭೂಮಿಯ ಮೇಲಿನ ಜೀವನದ ಸಮಯಗಳಲ್ಲಿ ದೇವರು ತನ್ನನ್ನು ತೊಡಗಿಸಿಕೊಂಡಿದ್ದಾನೆ. ಭೂಮಿಯ ಮೇಲಿನ ಮನುಷ್ಯನ ವ್ಯವಹಾರಗಳ ಕಾಲಗಳನ್ನು ಸಮಯಗಳನ್ನೂ ಬದಲಿಸುವಾತನು ದೇವರೇ.

## ದೇವರು ಕಾಲಗಳನ್ನೂ ಸಮಯಗಳನ್ನೂ ಬದಲಿಸುತ್ತಾನೆ

**''ಕಾಲ ಸಮಯಗಳನ್ನು ಮಾರ್ಪಡಿಸುತ್ತಾನೆ; ರಾಜರನ್ನು ತಳ್ಳುತ್ತಾನೆ, ನಿಲ್ಲಿಸುತ್ತಾನೆ; ಜ್ಞಾನಿಗಳ ಜ್ಞಾನವು ವಿವೇಕಿಗಳ ಈಗಿನ ವಿವೇಕವು ಆತನ ವರವೇ''** (ದಾನಿಯೇಲನು 2:21)

ದೇವರು ಭೂಮಿಯ ಮೇಲೆ ಕಾಲಗಳನ್ನು ಸಮಯಗಳನ್ನೂ ನಿಯಂತ್ರಿಸಿ ಅವುಗಳ ಮೇಲೆ ಪ್ರಭಾವ ಬೀರುತ್ತಾನೆ ವಿಶ್ವಾಸಿಗಳಾಗಿ, ನಮ್ಮ ಜೀವನಗಳ ಕಾಲಗಳೂ ಸಮಯಗಳೂ ಆತನ ಕೈಗಳಲ್ಲಿದೆ ಎಂಬ ಆಶ್ವಾಸನೆ ಕೊಡಲ್ಪಟ್ಟಿದ್ದೇವೆ. ನಮಗೆ ಈ ಆಶ್ಚರ್ಯಕರವಾದ ಭರವಸೆಯೂ ನಿರೀಕ್ಷೆಯೂ ಇದೆ. ''ನನ್ನ ಆಯುಷ್ಕಾಲವು ನಿನ್ನ ಕೈಯಲ್ಲಿದೆ; ಹಿಂದಟ್ಟುವ ಶತ್ರುಗಳಿಗೆ ನನ್ನನ್ನು ತಪ್ಪಿಸಿ ಕಾಪಾಡು (ಮತ್ತು ನನ್ನ ಹಿಂಸಕರಿಂದ ಬಿಡಿಸು)'' (ಕೀರ್ತನೆಗಳು 31:15). ಕೀರ್ತನೆ 31:15ರಲ್ಲಿ 'ಕಾಲ'ಕ್ಕೆ ಉಪಯೋಗಿಸಲಾದ ಇಬ್ರಿಯ ಪದವು ನಮ್ಮ ಜೀವನದ 'ಇತ್ತೀಚಿನ'ಗಳಿಗೆ ಮತ್ತು 'ಯಾವಾಗ'ಗಳಿಗೆ ಸಂಬಂಧಿಸಿದೆ. ನಮ್ಮ ಜೀವನಗಳ 'ಇತ್ತೀಚಿನ' ಮತ್ತು 'ಯಾವಾಗಗಳು' ದೇವರ ಕೈಗಳಲ್ಲಿವೆ. ಆತನಿಗೆ ಸರಿ ಕಂಡಂತೆ ಆತನು ಅವುಗಳನ್ನು ಏರ್ಪಡಿಸುತ್ತಾನೆ. ನಮ್ಮಲ್ಲಿ ಕೆಲವರು ಯಾವಾಗ ಸರಿಯಾದ ಕೆಲಸ ಸಿಕ್ಕುವುದು ಅಥವಾ ತಕ್ಕ ವ್ಯಕ್ತಿಯೊಂದಿಗೆ ಮದುವೆಯಾಗುವುದು ಎಂದು ವಿಪರೀತ ಕಾತರರಾಗಿರಬಹುದು. ನಮ್ಮ ಜೀವನಗಳ 'ಯಾವಾಗಗಳು' ಆತನ ಕೈಗಳಲ್ಲಿವೆ ಎಂಬ ಭರವಸೆಯಿಂದ ನಾವು ನಿಶ್ಚಿಂತರಾಗಿರಲು ಕಲಿಯತಕ್ಕದ್ದು. ಜೀವನದ ಸಮಯಗಳನ್ನು ತಿಳಿದು ಗ್ರಹಿಸಲು ಜ್ಞಾನವು ಬೇಕು. ನಾವು ಅವುಗಳ ಬದಲಾವಣೆಗಳಿಗೆ ಸಂವೇದನೆ ಹೊಂದಿದ್ದು ಅವುಗಳಿಗೆ ಯೋಗ್ಯ ಪ್ರತಿಕ್ರಿಯೆ ತೋರಬೇಕು.

''ಆಜ್ಞೆಯನ್ನು ಕೈಗೊಳ್ಳುವವನು ಕೇಡನ್ನು ಅನುಭವಿಸನು; ಕಾಲವೂ ನ್ಯಾಯತೀರ್ಪೂ ಉಂಟೆಂಬುದು ಜ್ಞಾನಿಯ ಬುದ್ಧಿಗೆ ಗೊತ್ತು'' (ಪ್ರಸಂಗಿ 8:5). ಪ್ರತಿಯೊಂದು ವಿಷಯವನ್ನು ಮಾಡಲು ಒಂದು ಯೋಗ್ಯ ಕಾಲವಿದೆ ಮತ್ತು ಮಾಡಬೇಕಾದ ಒಂದು ಸರಿಯಾದ ತೀರ್ಪು ಇದೆ. ಏನು ಮಾಡಬೇಕು ಮತ್ತು ಯಾವಾಗ ಮಾಡಬೇಕು ಎಂಬುದನ್ನು ತಿಳುಕೊಳ್ಳುವ ಸಾಮರ್ಥ್ಯವುಳ್ಳವನು ಜ್ಞಾನಿಯಾಗಿದ್ದಾನೆ. ಇಸ್ಸಾಕಾರನ ಮಕ್ಕಳು ಸಮಯೋಚಿತ ಜ್ಞಾನವುಳ್ಳವರಾಗಿ ಇಸ್ರಾಯೇಲ್ಯರು ಆ ಕ್ಷಣದಲ್ಲಿ ಮಾಡತಕ್ಕದ್ದನ್ನು ಅರಿತರು ಎಂದು 1 ಪೂರ್ವಕಾಲವೃತ್ತಾಂತ 12:32 ಹೇಳುತ್ತದೆ. ಒಬ್ಬರಿಗೆ ಕಾಲಗಳ ಮತ್ತು ಸಮಯಗಳ ಪರಿಜ್ಞಾನವಿದೆ ಎಂದು ನಾವು ಹೇಳುವಲ್ಲಿ, ಕಾಲದ ಆ ಕ್ಷಣದಲ್ಲಿ ಆ ವ್ಯಕ್ತಿಯು ಏನು ಮಾಡತಕ್ಕದ್ದೆಂದು ತಿಳಿದಿದ್ದಾರೆ ಎಂದು

ಹೇಳುತ್ತೇವೆ. ಜೀವನದ ಪ್ರತಿಯೊಂದು ಸಮಯದಲ್ಲೂ ಮಾಡಬೇಕಾದ ಒಂದು ನಿರ್ದಿಷ್ಟ ವಿಷಯವಿದೆ. ನಾವು ಒಂದು ಬಿಕ್ಕಟ್ಟಿನಲ್ಲಿದ್ದು ಏನು ಮಾಡಬೇಕು ಎಂದು ಆಶ್ಚರ್ಯಪಡುತ್ತಿರುವಾಗ, ತಡೆದು ನಾವು ಜೀವನದ ಯಾವ ಸಮಯದಲ್ಲಿ ಇದ್ದೇವೆ ಎಂದು ಪರೀಕ್ಷಿಸಿಕೊಳ್ಳುವುದು ಉತ್ತಮ. ಉದಾಹರಣೆಗಾಗಿ, ಹತ್ತನೇ ತರಗತಿಯಲ್ಲಿರುವ ಒಬ್ಬನು ಮದುವೆಯ ಕುರಿತು ಯೋಚಿಸುವುದು ಕೂಡ ಹಾಸ್ಯಾಸ್ಪದ. ಮದುವೆಯು ಒಳ್ಳೆಯದು, ಆದರೆ ಹತ್ತನೆಯ ತರಗತಿಯ ಒಬ್ಬ ಹುಡುಗನಿಗೆ ಮದುವೆಯು ಪೂರ್ಣನಾಗಿ ''ಸಮಯಕ್ಕೆ ಸಲ್ಲದ್ದು'' ಮತ್ತು ಹಾಗೆ ಮಾಡುವುದು ತಪ್ಪು ಕೆಲಸ ಕೂಡ. ನಮ್ಮ ಜೀವನದ ಪ್ರತಿಯೊಂದು ಸಮಯದಲ್ಲೂ ಮಾಡಬೇಕಾದ ಒಂದು ನಿರ್ಧಿಷ್ಟ ವಿಷಯವಾಗಿದೆ. ಪ್ರತಿಯೊಂದು ಸಮಯಕ್ಕೂ ಸಾಧಿಸಬೇಕಾದ ನಿರ್ಧಿಷ್ಟ ಕೆಲಸಗಳಿದ್ದು ಅದರದೇ ಕಾರಣಗಳಿವೆ. ನೀವು ಇರುವ ನಿಮ್ಮ ಜೀವನದ ಸಮಯವನ್ನು ತಿಳಿದುಕೊಂಡು ಆ ಸಮಯದಲ್ಲಿ ಮಾಡಬೇಕಾದದ್ದನ್ನು ತಿಳಿದುಕೊಳ್ಳಿರಿ.

> ನಮ್ಮ ಜೀವನಗಳ 'ಇತ್ತೀಚಿನವುಗಳು' ಮತ್ತು 'ಯಾವಾಗಗಳು' - ನಮ್ಮ ಜೀವನದ ಸಮಯಗಳು - ಆತನ ಕೈಗಳಲ್ಲಿವೆ.

# 2

# ಜೀವನದ ರಾತ್ರಿಯ ಸಮಯಗಳು

## ರಾತ್ರಿಯ ಸಮಯದ ಗುಣಲಕ್ಷಣಗಳು

ನಾವೆಲ್ಲರೂ ಜೀವನದಲ್ಲಿ ವಿವಿಧ ಸಮಯಗಳನ್ನು ಹಾದು ಹೋಗುತ್ತೇವೆ. ಜೀವನದಲ್ಲಿ ಕೆಲವು ಅದ್ಭುತಕರವಾದ ಸಮಯಗಳನ್ನು ಅನುಭವಿಸುವಾಗ, ಅದ್ಭುತಕರವಲ್ಲದ ಕೆಲವು ಕಾಲಾವಧಿಗಳನ್ನೂ ದಾಟುತ್ತೇವೆ. ಜೀವನದ ಅಂಥ ಕಾಲಾವಧಿಗಳನ್ನು ನಾವು 'ರಾತ್ರಿಯ ಸಮಯಗಳು' ಎನ್ನಬಹುದು. ನಾವೆಲ್ಲರೂ 'ಹಗಲು' 'ರಾತ್ರಿ'ಗಳನ್ನು ದಾಟುತ್ತೇವೆ. ರಾತ್ರಿಯ ಸಮಯಗಳ ಗುಣಲಕ್ಷಣಗಳನ್ನು ಹೇಳುವ ಕೆಲವು ಜಾಡುಗಳು, ಹೆಜ್ಜೆಯ ಗುರುತುಗಳು, ಇಲ್ಲಿವೆ.

## ಕತ್ತಲು

ಜೀವನದ ರಾತ್ರಿಯ ಸಮಯವು ಮುಂದೆ ಸರಿಯಾಗಿ ಕಾಣದ ಲಕ್ಷಣವುಳ್ಳ ಒಂದು ಸಮಯ. ಮುಂದಿನ ದಾರಿ ಕತ್ತಲು, ನಿರ್ವರ್ಣ, ಅಸ್ಪಷ್ಟ. ಇತ್ತೀಚಿನವರೆಗೆ ಹಾದಿಯು ಶುಭ್ರ, ಸ್ಪಷ್ಟವಾಗಿತ್ತು ಆದರೆ ಫಕ್ಕನೆ ಎಲ್ಲವೂ ಅಂಧಕಾರಮಯ. ಸನ್ನಿವೇಶವು ನಿರಾಶಾದಾಮಯವಾಗಿದ್ದು ಭವಿಷ್ಯವು ಅನಾದರಣೀಯವಾಗಿ ಕಾಣುತ್ತದೆ. ಮುಂದಿನ ಕಾರ್ಯಗತಿಯನ್ನು ನಿರ್ಧರಿಸಲು ನಮಗೆ ಆಗದೆ ಹೋಗುತ್ತದೆ.

## ನಿಸ್ತಬ್ಧತೆ

ಎಲ್ಲವೂ ಮೌನ, ಅಚಲ ಮತ್ತು ನಿಸ್ತಬ್ಧತವೆನಿಸುತ್ತದೆ. ಏನೂ ಸಂಭವಿಸದಂತಿದೆ. ಪ್ರಾರ್ಥಿಸಿ, ದೇವರನ್ನು ಹುಡುಕಿದರೂ ಏನೂ ಸಂಭವಿಸುವುದಿಲ್ಲವೆನಿಸುತ್ತದೆ. ನಮ್ಮ ಎಲ್ಲಾ ಪ್ರಾರ್ಥನೆಗಳಿಗೂ ಉತ್ತರವಿಲ್ಲ. ಏನನ್ನಾದರೂ ಸಾಧಿಸಲು ಮಾಡುವ ಪ್ರಯತ್ನಗಳೆಲ್ಲಾ ವ್ಯರ್ಥ. ನಮ್ಮ ಸನ್ನಿವೇಶಗಳ ಮೇಲೆ ದೇವರ ವಾಕ್ಯವನ್ನು ಪ್ರಯೋಗಿಸುವಾಗ ನಮ್ಮ ವಿಶ್ವಾಸವು ನಿಜವಾಗಿಯೂ ಕೆಲಸ ಮಾಡುತ್ತದೋ ಎಂದು ಪ್ರಶ್ನಿಸಿಕೊಳ್ಳುವ ಸ್ಥಿತಿಗೆ ನಾವು ಬರಬಹುದು. ಎಲ್ಲವೂ ತಟಸ್ಥವಾಗಿ, ದೀರ್ಘವಿಳಂಬಗಳಾಗುವಂತೆ ಕಾಣುವುದರಿಂದ ನಾವು ದೇವರ ಪ್ರಸನ್ನತೆಯನ್ನು ಕೂಡ ಪ್ರಶ್ನಿಸಬಹುದು.

## ಒಂಟಿತನ

ಒಂಟಿತನವು ಎಡೆಬಿಡದ ಒಡನಾಡಿ ಎನಿಸುತ್ತದೆ. ನಮ್ಮನ್ನು ಯಾರೂ ಲಕ್ಷಿಸುವುದಿಲ್ಲ ಎಂಬಂತಿರುತ್ತದೆ. ನಾವು ಅನುಭವಿಸುತ್ತಿರುವವುಗಳನ್ನು ಯಾರೂ ತಿಳಿದುಕೊಳ್ಳದಂತಿರುತ್ತದೆ. ನಾನು ನಿಮ್ಮೊಂದಿಗಿದ್ದೇನೆ ಎಂಬ ದೇವರ ವಾಗ್ದಾನವು ನಿಜವಾಗಿ ಸತ್ಯವೋ ಎಂದು ಅಚ್ಚರಿ ಪಡುವಷ್ಟು ಜೀವನವು ಒಂಟಿಯಾಗಿರಬಹುದು. ದೇವರು ಮಿಲಿಯನ್‌ಗಟ್ಟಲೆ ಮೈಲುಗಳಷ್ಟು ದೂರವಿದ್ದಂತಾಗುತ್ತದೆ.

## ಆಂತರಿಕ ಸಂಕ್ಷೋಭೆ

ರಾತ್ರಿಯ ಸಮಯವು ಒಂದು ದೊಡ್ಡ ಅರಸುವಿಕೆಯ ಮತ್ತು ಪ್ರಶ್ನಿಸುವ ಕಾಲವಾಗಿರಬಹುದು. ನಮ್ಮನ್ನು ಕಾಡಿಸುವ ಅನೇಕ ಪ್ರಶ್ನೆಗಳಿರಬಹುದು, ಅವುಗಳಿಗೆ ಉತ್ತರಗಳನ್ನು ಹುಡುಕುತ್ತಿದ್ದೇವೆ. ''ನನಗೆ ಯಾವಾಗ ಬಡ್ತಿ ಸಿಗುವುದು?'' ''ನನಗೆ ಮದುವೆಯಾಗಲು ಇನ್ನೆಷ್ಟು ಕಾಯಬೇಕಾಗಿದೆ?'' ''ನನಗೆ ತಕ್ಕದಾದ ಸಂಗಾತಿಯನ್ನು ನಾನು ಯಾವಾಗ ಕಂಡುಕೊಳ್ಳುವುದು?'' ಇತ್ಯಾದಿ ಪ್ರಶ್ನೆಗಳನ್ನು ಎದುರಿಸುತ್ತಿರಬಹುದು. ಬಹಳ ಪ್ರಶ್ನೆ, ಹುಡುಕುವಿಕೆ, ಕೇಳುವಿಕೆಗಳು ನಡೆಯುತ್ತವೆ.

## ಗಮನಕ್ಕೆ ಬರದಿರುವಿಕೆ

ಗಮನಕ್ಕೆ ಬರದಿರುವಿಕೆಯು ರಾತ್ರಿಯ ಸಮಯದ ಲಕ್ಷಣ. ನಮಗೆ ಶ್ರೇಷ್ಠ ಬುದ್ದಿಶಕ್ತಿ, ಕೌಶಲ್ಯಗಳು ಮತ್ತು ಸಾಮರ್ಥ್ಯಗಳು ಇರಬಹುದು. ಆದರೆ ಅನೇಕರಿಂದ ಗುರುತಿಸಿಕೊಳ್ಳದೆ ಇದ್ದೇವೆ. ನಾವು ಮರೆ ಮಾಡಲ್ಪಟ್ಟಂತಿದ್ದೇವೆ. ನಮ್ಮನ್ನು ಯಾರೂ ಅರಿಯರು.

ಮೋಶೆಯ ಉದಾಹರಣೆಯನ್ನು ಗಮನಿಸಿರಿ. ಇಸ್ರಾಯೇಲ ಜನರ ನಾಯಕನಾಗಿ ಕರೆಯಲ್ಪಟ್ಟವನು ಅಡವಿ ಭೂಮಿಯಲ್ಲಿ ಕುರಿಗಳನ್ನು ಮೇಯಿಸುತ್ತಿದ್ದನು. ಮತ್ತೊಂದು ಉದಾಹರಣೆಗೆ ದಾವೀದನು, ಅವನು ಇಸ್ರಾಯೇಲ್ಯರ ಅರಸನಾಗಿ ಕರೆಯಲ್ಪಟ್ಟವನು ಕೂಡ ಅಡವಿ ಪ್ರದೇಶದಲ್ಲಿ ಕುರಿಗಳನ್ನು ಕಾಯುತ್ತಿದ್ದನು. ಯೋಸೇಫನು ಸೆರೆಮನೆ ಯಲ್ಲಿದ್ದನು. ಮೆಸ್ಸೀಯನ ಮುಂದೂತನೆಂದು ಕರೆಯಲ್ಪಟ್ಟ ಸ್ನಾನಿಕನಾದ ಯೋಹಾನನು ಅಡವಿ ಪ್ರದೇಶದಲ್ಲಿ ಮಿಡಿತೆಗಳನ್ನು ಕಾಡುಜೇನನ್ನೂ ಆಹಾರವಾಗಿ ತಿಂದು ಇದ್ದನು. ಅವನು ಯೇಸುವಿನ ಮುಂದೂತನವನಾಗಿರಬೇಕಾದವನಾಗಿದ್ದರೂ ತಾನು ಏಕೆ ಅಲ್ಲಿದ್ದಾನೆ ಎಂದು ಅವನು ಒಮ್ಮೆಯಾದರೂ ಪ್ರಶ್ನಿಸಲಿಲ್ಲ. ಶ್ರೇಷ್ಠ ಅಪೊಸ್ತಲನೆನಿಸಿಕೊಂಡ ಪೌಲನು 13 ವರ್ಷ ಕಾಲ ಅಜ್ಞಾತದಲ್ಲಿ ಯಾರ ಗಮನಕ್ಕೂ ಬಾರದೆ ಇದ್ದನು.

# 3

# ರಾತ್ರಿಯು ಎಲ್ಲಿಂದ ಬರುತ್ತದೆ?

ರಾತ್ರಿಯ ಸಮಯಗಳನ್ನು ತಿಳಿದುಕೊಳ್ಳುವ ಪ್ರಯತ್ನದಲ್ಲಿ ನಾವು ಮುಂದುವರಿಯುವಾಗ, ಅನೇಕ ಪ್ರಶ್ನೆಗಳಿಗೆ ನಮಗೆ ಉತ್ತರಗಳು ಬೇಕಾಗಿವೆ ಎಂದು ತಿಳಿಯುತ್ತೇವೆ. ರಾತ್ರಿಯ ಸಮಯಗಳಿಗೆ ಕಾರಣಗಳೇನು? ಅದು ಯಾವಾಗ ಮತ್ತು ಹೇಗೆ ಸಂಭವಿಸುತ್ತದೆ? ನನ್ನ ಜೀವನವನ್ನು ಮತ್ತು ನಾನು ಅನುಭವಿಸಿದ ರಾತ್ರಿಯ ಸಮಯಗಳನ್ನು ನಾನು ನನ್ನಲ್ಲೇ ಆಲೋಚಿಸಿಕೊಂಡರೆ, ರಾತ್ರಿಯ ಸಮಯಗಳು ಏಕೆ ಬರುತ್ತವೆ ಎಂದು ನಾಲ್ಕು ಕಾರಣಗಳನ್ನಾದರೂ ಹೇಳಬಹುದು.

## ಅಂಥ ಸಮಯಗಳೊಳಕ್ಕೆ ಕರ್ತನು ಮಾರ್ಗವನ್ನು ನಡೆಸುತ್ತದೆ

ದೇವರು ನಮ್ಮನ್ನು ಅದರೊಳಕ್ಕೆ ನಡೆಸಿದ್ದರಿಂದ ನಮ್ಮಲ್ಲಿ ಕೆಲವರು ರಾತ್ರಿಯ ಸಮಯದಲ್ಲಿರಬಹುದು. ಆತನಿಗೆ ಅದರಲ್ಲಿ ಒಂದು ಉದ್ದೇಶವಿರಬಹುದು. ಸತ್ಪುರುಷನ ಗತಿ ಸ್ಥಾಪನೆಯು ಕರ್ತನಿಂದಲೇ ಆಗಿದೆ ಎಂದು ಸತ್ಯವೇದ ಹೇಳುತ್ತದೆ (ಕೀರ್ತನೆಗಳು 37:23). ಈ ಪುಸ್ತಕದಲ್ಲಿ ಮೊದಲು ಹೇಳಿದ ಸ್ನಾನಿಕನಾದ ಯೋಹಾನನ ಉದಾಹರಣೆಯನ್ನು ಗಮನಿಸಿರಿ. ಯೇಸುವಿನ ಮುಂದೂತನಾಗಿ ಕರೆಯಲ್ಪಟ್ಟ ಸ್ನಾನಿಕನಾದ ಯೋಹಾನನು ಯಾರಿಗೂ ಏನು ಸಂಭವಿಸಿತೆಂದು ತಿಳಿಯುವ ಮೊದಲು ಅವನ ಜೀವನದ ಅನೇಕ ವರ್ಷಗಳನ್ನು ಅಡವಿಯಲ್ಲಿ ಕಳೆದನು. ಅವನು ತನ್ನನ್ನು ಪ್ರಕಟಿಸಿಕೊಳ್ಳುವ ದಿನದವರೆಗೆ ಆ ಕಾಲವನ್ನು ಅರಣ್ಯಪ್ರದೇಶಗಳಲ್ಲಿ ಕಳೆದನು (ಲೂಕ 1:80). ಕರ್ತನು ಸ್ನಾನಿಕನಾದ ಯೋಹಾನನಿಗೆ, ''ನನ್ನ ಕಾಲವು ಬರುವವರೆಗೆ, ನಿನಗಾಗಿ ನಾನು ಸಿದ್ಧಮಾಡಿದ ಸ್ಥಳವು ಅರಣ್ಯಪ್ರದೇಶವಾಗಿದೆ'' ಎಂದು ಹೇಳುವಂತಿತ್ತು. ಸ್ನಾನಿಕನಾದ ಯೋಹಾನನು ದೇವರ ಜ್ಞಾನವನ್ನು ಪ್ರಶ್ನಿಸಿದ ದಾಖಲೆ ಇಲ್ಲ.

ಯೆರೂಸಲೇಮಿನಿಂದ ದಮಸ್ಕದ ದಾರಿಯಲ್ಲಿದ್ದ ಅಪೊಸ್ತಲನಾದ ಪೌಲನ ಉದಾಹರಣೆಯನ್ನು ಗಮನಿಸಿರಿ. ಯೇಸುಕ್ರಿಸ್ತನೊಂದಿಗೆ ಅವನ ಅನಿರೀಕ್ಷಿತ ಸಮಾಗಮವಾದಾಗ ಅವನು ಒಂದು ಪ್ರಕಾಶಮಾನವಾದ ಬೆಳಕನ್ನು ಕಂಡನು. ದೇವರು ಅವನನ್ನು ರಕ್ಷಿಸಿದನು. ಅಪೊಸ್ತಲನಾಗುವುದು ಅವನ ಜೀವನಕ್ಕೆ ದೇವರ ಕರೆಯಾಗಿತ್ತು. ಅದಾದ ಬಳಿಕ, ಅವನು ದಮಸ್ಕಕ್ಕೆ ಹೋಗಿ, ಅವನ ದೃಷ್ಟಿಯನ್ನು ಪಡಕೊಂಡು,

ಯೇಸುವಿನ ವಿಷಯವಾಗಿ ಬೋಧಿಸಲು ಪ್ರಾರಂಭಿಸಿದನು (ಅಪೊಸ್ತಲರ ಕೃತ್ಯಗಳು 9:19-25). ಅವನ ಜೀವಕ್ಕೆ ಅಪಾಯವಿತ್ತು ಮತ್ತು ಮೂರು ವರ್ಷ ಕಾಲ ಅರೆಬಿಯದ ಮರುಭೂಮಿಯಲ್ಲಿದ್ದನು (ಗಲಾತ್ಯದವರಿಗೆ 1:18). ಬಳಿಕ ಅವನು ಯೆರೂಸಲೇಮಿಗೆ ಹಿಂತಿರುಗಿ ಬಂದು, ಅಪೊಸ್ತಲರನ್ನು ಸಂಧಿಸಿ, ಅವನಿಗೆ ದೊರೆತ ಅದ್ಭುತ ಪ್ರಕಟನೆಗಳನ್ನು ಅವರಿಗೆ ವಿವರಿಸಿ ಹೇಳಿದನು. ಪುನಃ ಅವನ ಜೀವಕ್ಕೆ ಅಪಾಯ ಬಂದದ್ದರಿಂದ ಅಲ್ಲಿಂದ ಹೋಗಬೇಕಾಯಿತು - ಅದು 13ವರ್ಷಗಳ ಕಾಲಾವಧಿಯಾಗಿತ್ತು. ಅವನ ಜೀವನದ ಆ ಕಾಲಾವಧಿಯಲ್ಲಿ ನಿಜವಾಗಿ ನಡೆದ ಘಟನೆಗಳೇನಾಗಿದ್ದವು ಎಂದು ಯಾರಿಗೂ ತಿಳಿಯದು. ಪೂರ್ವದಲ್ಲಿ ಕ್ರೈಸ್ತರನ್ನು ಹಿಂಸೆಪಡಿಸುತ್ತಿದ್ದನು ಈಗ ಕ್ರಿಸ್ತನನ್ನು ಪ್ರಸಿದ್ಧಿಪಡಿಸುತ್ತಿದ್ದಾನೆ ಎಂದು ಮಾತ್ರ ಅವರು ಕೇಳಿದರು. (ಗಲಾತ್ಯದವರಿಗೆ 1:21-24) ಪೌಲನು 13 ವರ್ಷ ಸಿರಿಯ ಮತ್ತು ಕಿಲಿಕ್ಯದಲ್ಲಿದ್ದು ಬಳಿಕ ತಾರ್ಸಕ್ಕೆ ಬಂದನು. ಬಾರ್ನಬನು ಅಂತಿಯೋಕ್ಯದಿಂದ ಬಂದು ಅವನನ್ನು ಕಂಡುಕೊಂಡನು. ಬಾರ್ನಬನು ಅವನನ್ನು ಅಂತಿಯೋಕ್ಯಕ್ಕೆ ಕರೆದುಕೊಂಡು ಬಂದನು ಮತ್ತು ಆ ಬಳಿಕ ಒಂದು ವರ್ಷ ಪೌಲನು ವಾಕ್ಯವನ್ನು ಉಪದೇಶಮಾಡಿದನು (ಅಪೊಸ್ತಲರ ಕೃತ್ಯಗಳು 11:25,26). ಅನಂತರ ಅವನು ಅಪೊಸ್ತಲ ಸೇವೆಯಲ್ಲಿ ಮಿಷನರಿಯಾಗಿ ಕಳುಹಿಸಿಲ್ಪಟ್ಟನು (ಅಪೊಸ್ತಲರ ಕೃತ್ಯಗಳು 13:2,4). ಹೀಗೆ, ಕರ್ತನಾದ ಯೇಸು ಅವನನ್ನು ದಮಸ್ಕದ ದಾರಿಯಲ್ಲಿ ಸಂಧಿಸಿದ ಕಾಲದಿಂದ ಅಪೊಸ್ತಲ ಸೇವೆಗೆ ಕಳುಹಿಸಲ್ಪಡುವವರೆಗೆ - ಸುಮಾರು 17 ವರ್ಷಕಾಲ - ಪೌಲನು ಏನು ಮಾಡಿದನೆಂಬ ದಾಖಲೆ ಇಲ್ಲ. ನಿಶ್ಚಯವಾಗಿ ಅವನು ಬೋಧಿಸುತ್ತ ಕರ್ತನ ಸೇವೆ ಮಾಡಿದನೆಂದು ನಮಗೆ ತಿಳಿದಿದೆ. ಆದಾಗ್ಯೂ ಅವು ನಮಗಾಗಿ ದಾಖಲಾಗುವಷ್ಟು ಮಹತ್ವವಾದವುಗಳೆಂದು ಕರ್ತನು ತಿಳಿಯಲಿಲ್ಲ. ಪೌಲನ ಈ ವರ್ಷಗಳು ಅನೇಕಾವರ್ತಿ 'ನಿಶ್ಯಬ್ದ ವರ್ಷಗಳು' ಎಂದು ಹೇಳಲ್ಪಡುತ್ತವೆ.

ನಮ್ಮಲ್ಲಿ ಕೆಲವರು ರಕ್ಷಣೆ ಹೊಂದಿದ ಕೂಡಲೇ, ದೇವರು ಕಾರ್ಯನಡಿಸುತ್ತಿರುವುದನ್ನು ಅರಿಯದೆ, ಮುಖ್ಯ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ. ನಿಶ್ಚಯವಾಗಿ ಆತನಿಗಾಗಿ ಸೇವೆಮಾಡಬೇಕೆಂಬ ನಮ್ಮ ಅಪೇಕ್ಷೆ ಮತ್ತು ಅತ್ಯಾಸಕ್ತಿಯನ್ನು ದೇವರು ಗೌರವಿಸುತ್ತಾನೆ. ಆದರೆ ಕೆಲವೊಮ್ಮೆ ನಮಗೆ ಎಲ್ಲವೂ ತಿಳಿದಿದೆ ಎಂದು ನೆನಪಿಸಿಕೊಳ್ಳುವ ತಪ್ಪನ್ನು ನಾವು ಮಾಡುತ್ತೇವೆ.! ಹೊಸ ಒಡಂಬಡಿಕೆಯಲ್ಲಿ ಮೂರರಲ್ಲಿ ಎರಡು ಭಾಗಗಳನ್ನು ಬರೆಯಲು ಕರೆಯಲ್ಪಟ್ಟ ಹಾಗೂ ಬಹಳ ಪ್ರಕಟನೆಗಳನ್ನು ಹೊಂದಿದ ಅಪೊಸ್ತಲನಾದ ಪೌಲನು ಕೂಡ 17

ವರ್ಷಗಳನ್ನು ಅಜ್ಞಾತದಲ್ಲಿ ಕಳೆದನು. ಹಾಗಿದ್ದಾಗ್ಯೂ, ಅವನು ಆ ಪ್ರಕಟನೆಗಳನ್ನು ಹೊಂದಿದ್ದು ಆ ಕಾಲದಲ್ಲಾಗಿತ್ತು.

## ನಮ್ಮ ಸ್ವಂತ ಕ್ರಿಯೆಗಳ ಪರಿಣಾಮವಾಗಿ ನಾವು ಎಡವಿ ಬೀಳುತ್ತೇವೆ/ನಿರ್ಧಾರಗಳು/ಆಯ್ಕೆಗಳು

ಕೆಲವೊಮ್ಮೆ, ನಾವು ಮಾಡುವ ನಿರ್ಧಾರಗಳಿಂದಾಗಿ ನಾವು ರಾತ್ರಿಯ ಸಮಯದಲ್ಲಿರುವುದನ್ನು ನೋಡುತ್ತೇವೆ. ಉದಾಹರಣೆಗಾಗಿ, ಒಬ್ಬ ವಿದ್ಯಾರ್ಥಿಯು ಅಭ್ಯಾಸದಲ್ಲಿ ತೊಡಗಿಸಿಕೊಳ್ಳುವ ಬದಲಾಗಿ ಇತರ ಕೆಲಸಗಳಲ್ಲಿ ಕಾಲಹರಣ ಮಾಡಿ, ಬಳಿಕ ಪರೀಕ್ಷೆಯಲ್ಲಿ ಅನುತ್ತೀರ್ಣನಾಗುತ್ತಾನೆ. ಒಬ್ಬ ವಿದ್ಯಾರ್ಥಿಯ ಜೀವನದ ರಾತ್ರಿಯ ಸಮಯಕ್ಕೆ ಇದು ಉತ್ತಮ ಉದಾಹರಣೆ. ಅನಂತರದ ದಿನಗಳಲ್ಲಿ ಒಂದು ಕೆಲಸ ದೊರಕಿಸಿಕೊಳ್ಳಲು ಅಥವಾ ಒಂದು ದಿಕ್ಕಿನಲ್ಲಿ ಪ್ರಗತಿ ಸಾಧಿಸಲು ಕಷ್ಟವಾಗುವುದು. ಅವನ ಜೀವನದಲ್ಲಿ ಅವನು ಏಕೆ ಈ ಅವಧಿಯನ್ನು ದಾಟಿ ಹೋಗುತ್ತಿದ್ದಾನೆಂದು ದೇವರನ್ನು ಪ್ರಶ್ನಿಸುವುದು ತೀರ ಅಸಂಬದ್ಧವಾಗಿದೆ. ದೇವರು ಇದನ್ನು ಸಂಭವಿಸಲು 'ಬಿಟ್ಟಿದ್ದಾನೆ' ಎಂದು ಯಾರೂ ತಿಳಿಯಬಾರದು, ಯಾಕೆಂದರೆ ಅದು ಆ ವಿದ್ಯಾರ್ಥಿಯೇ ತನ್ನ ಮೇಲೆ ಬರಮಾಡಿಕೊಂಡಿದ್ದಾಗಿದೆ. ಅವನು ಕಲಿತು ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕಾಗಿತ್ತು. ಹಾಗೆ ಮಾಡಿದ್ದರೆ, ಅವನ ಜೀವನವು ಪೂರ್ತಿ ಬೇರೆಯಾಗಿರುತ್ತಿತ್ತು. ಅಂಥ ಸಂಭವಗಳಿಗಾಗಿ ನಾವು ದೇವರನ್ನು ದೂರಲಾಗದು. ನಾವು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ದೇವರು ನಮಗೆ ಕೊಟ್ಟಿದ್ದಾನೆ, ನಾವು ಬುದ್ಧಿಯುಳ್ಳ ಆಯ್ಕೆಗಳನ್ನು ಮಾಡದೆ ಹೋದರೆ, ನಮ್ಮ ಜೀವನದಲ್ಲಿ ನಾವು ಕಷ್ಟದ ಕಾಲಗಳನ್ನು ಸೇರದಂತೆ ದೇವರು ತನ್ನ ಚಿತ್ತವನ್ನು ಒತ್ತಾಯದಿಂದ ನಮ್ಮ ಮೇಲೆ ಹೊರಿಸುವುದಿಲ್ಲ.

ಪರಿಶುದ್ಧ ಗ್ರಂಥಗಳಿಂದ ಇನ್ನೊಂದು ಉದಾಹರಣೆಯನ್ನು ನೋಡಿರಿ. ತನ್ನ ಜನರನ್ನು ವಿಮೋಚಿಸುವುದಕ್ಕಾಗಿ ಕರೆಯಲ್ಪಟ್ಟಿದ್ದಾನೆ ಎಂದು ಮೋಶೆಗೆ ತಿಳಿದಿತ್ತು. ಆದರೆ ಅವನ ಜನರು ಅವನನ್ನು ಸರ್ವಾನುಮತದಿಂದ ನಾಯಕನಾಗಿ ಸ್ವೀಕರಿಸುವರು ಎಂದು ನೆನಸಿಕೊಳ್ಳುವ ತಪ್ಪನ್ನು ಅವನು ಮಾಡಿದನು. ಐಗುಪ್ತದಲ್ಲಿ ಪಡೆದ ತರಬೇತಿಯಿಂದ ಅವನು ಸಿದ್ಧತೆ ಹೊಂದಿದ್ದಾನೆಂಬ ಸ್ವ-ಭರವಸೆಯಿಂದ ಹೊರಟನು. ಒಬ್ಬ ಇಬ್ರಿಯನೂ ಐಗುಪ್ತ್ಯದವನೂ ಜಗಳಮಾಡುತ್ತಿದ್ದದ್ದನ್ನು ನೋಡಿ ಇಬ್ರಿಯನನ್ನು

ರಕ್ಷಿಸುವ ಪ್ರಯತ್ನದಲ್ಲಿ ಐಗುಪ್ತ್ಯನನ್ನು ಕೊಂದನು. ಇನ್ನೊಮ್ಮೆ, ಇಬ್ಬರು ಇಬ್ರಿಯರು ಜಗಳವಾಡುತ್ತಿದ್ದದ್ದನ್ನು ಕಂಡು, ಮಧ್ಯ ಪ್ರವೇಶಿಸಲು ನೋಡಿದಾಗ, ಐಗುಪ್ತ್ಯದವನಿಗಾದ ಗತಿಯು ಅವರಿಗಾಗುವುದೋ ಎಂದು ಪ್ರಶ್ನಿಸಿದರು. ಮೋಶೆಯು ಭಯಗೊಂಡು ಅಲ್ಲಿಂದ ಓಡಿ ಹೋಗಿ ಅರಣ್ಯ ಪ್ರದೇಶದಲ್ಲಿ 40 ವರ್ಷ ಕಳೆಯಬೇಕಾಯಿತು. ಈಗ ದೇವರು ಆ 40 ವರ್ಷಗಳನ್ನು ಆ ರೀತಿ ಯೋಜಿಸಿದ್ದನೋ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಉತ್ತರವು ''ಇಲ್ಲ'' ಎಂಬುದಾಗಿದೆ. ಮೋಶೆಯು ಮಾಡಿದ ತಪ್ಪುಗಳಿಂದಾಗಿ ಅವನು ಅರಣ್ಯದಲ್ಲಿದ್ದನು. ದೇವರ ಮೂಲ ಯೋಜನೆಯಿಂದ ಹೊರಗೆ ಹೆಜ್ಜೆ ಹಾಕಿದ್ದನು. ಅವನ ರೀತಿಯಲ್ಲಿ ಮಾಡಲು ಪ್ರಯತ್ನಿಸಿದನು. ವಿಮೋಚಕನಾಗಲು ಕರೆಯಲ್ಪಟ್ಟಿದ್ದನೆಂದು ಅವನು ತಿಳಿದಿದ್ದನು, ಆದರೆ ದೇವರ ಸಮಯಕ್ಕಾಗಿ ಮತ್ತು ರೀತಿಗಾಗಿ ಕಾಯಲಿಲ್ಲ. ಅವನಿಗೆ ಕಂಡಂತೆ ಮಾಡಲು ಪ್ರಯತ್ನಿಸಿ 40 ವರ್ಷ ಅರಣ್ಯಪ್ರದೇಶದಲ್ಲಿ ಕಳೆದನು (ಅಪೊಸ್ತಲರ ಕೃತ್ಯಗಳು 7:20-30) ಮೋಶೆಯನ್ನು ಕೊಲ್ಲಬೇಕೆಂದಿದ್ದವರು ಸಾಯುವವರೆಗೆ ದೇವರು ಕಾಯಬೇಕಾಯಿತು (ವಿಮೋಚನಕಾಂಡ 2:15, 23)

ಕಾನಾನ್ ದೇಶವನ್ನು ಅವರಿಗೆ ಸ್ವಾಸ್ತ್ಯವಾಗಿ ಕೊಡಲು ಅದರ ಮೇರೆಯವರೆಗೆ ದೇವರು ಕರೆತಂದ ಇಸ್ರಾಯೇಲ್ಯರನ್ನು ಗಮನಿಸಿರಿ. ಆ ದೇಶವನ್ನು ಹೊಂಚಿ ನೋಡುವುದಕ್ಕಾಗಿ 12 ಮಂದಿಯನ್ನು ಕಳುಹಿಸಿ ಆ ದೇಶವನ್ನು ಹಂಚಿಕೊಳ್ಳುವ ಕಾರ್ಯತಂತ್ರವನ್ನು ರೂಪಿಸುವಷ್ಟನ್ನೇ ಇಸ್ರಾಯೇಲ್ಯರು ಮಾಡಬೇಕಾಗಿದ್ದದ್ದು ಅವರಲ್ಲಿ ಹತ್ತು ಮಂದಿ ಅವಿಶ್ವಾಸದಿಂದ ಕೆಟ್ಟ ವರದಿಯನ್ನು ತಂದರು. ಅವರು ಕಾನಾನಿನಲ್ಲಿದ್ದ ಜನರಿಗೆ ಹೆದರಿ, ಆ ದೇಶವನ್ನು ಸ್ವಾಸ್ತ್ಯವಾಗಿ ಹೊಂದುವರೆಂದು ವಾಗ್ದಾನ ಮಾಡಿದ ದೇವರನ್ನು ನಂಬಲೊಲ್ಲದ ಆಯ್ಕೆ ಮಾಡಿದರು. ಅವರು ಐಗುಪ್ತ್ಯಕ್ಕೆ ಹಿಂದಿರುಗಬೇಕೆಂದಿದ್ದರು. ಅವರ ಅಪನಂಬಿಕೆಗೂ ಗುಣುಗುಟ್ಟುವಿಕೆಗೂ ದೇವರು ಹೇಗೆ ಪ್ರಕ್ರಿಯಿಸಿದನೆಂದು ನೋಡುವುದು ದುಃಖಕರವಾಗಿದೆ. ''ಅಮಾಲೇಕ್ಯರೂ ಕಾನಾನ್ಯರೂ ಆ ತಗ್ಗಿನಲ್ಲಿ ವಾಸವಾಗಿದ್ದಾರೆ. ನೀವು ನಾಳೆ ಹಿಂದಿರುಗಿಕೊಂಡು ಕೆಂಪು ಸಮುದ್ರಕ್ಕೆ ಹೋಗುವ ದಾರಿಯಲ್ಲಿ ಅರಣ್ಯಕ್ಕೆ ಪ್ರಯಾಣ ಮಾಡಬೇಕು'' (ಅರಣ್ಯಕಾಂಡ 14:25)

ದೇವರು ಅವರನ್ನು ಅರಣ್ಯಕ್ಕೆ ಹಿಂದಿರುಗಲು ಹೇಳಿದನು. ಅವರು 40 ವರ್ಷ ಅಲ್ಲಿದ್ದರು ಮತ್ತು ನಂಬದೆ ಹೋದವರಲ್ಲಿ ಯಾರಿಗೂ ವಾಗ್ದಾನದ ದೇಶಕ್ಕೆ ಪ್ರವೇಶ ಸಿಗಲಿಲ್ಲ. ಮತ್ತೊಮ್ಮೆ, ಅವರು 40 ವರ್ಷ ಅರಣ್ಯದಲ್ಲಿರುವುದು ದೇವರ

ಯೋಜನೆಯಾಗಿತ್ತೋ ಎಂದು ನಾವು ಆಶ್ಚರ್ಯ ಪಡಬಹುದು. ಉತ್ತರವು ''ಇಲ್ಲ'' ಎಂದಾಗಿದೆ. ಅವರು ದೇವರ ಅಪ್ಪಣೆಗಳಿಗೆ ವಿರುದ್ಧವಾದ ಕೆಲವು ಆಯ್ಕೆಗಳನ್ನು ಮಾಡಿದ್ದರಿಂದ ಅರಣ್ಯಕ್ಕೆ ಹಿಂದಿರುಗಬೇಕಾಯಿತು. ಹಾಗಿದ್ದಾಗ್ಯೂ, ದೇವರು ಅವರನ್ನು ನಡೆಸುತ್ತಾ, ಸಂರಕ್ಷಿಸುತ್ತಾ, ಸಂತೈಸುತ್ತಾ ಸತತವಾಗಿ ಅವರೊಂದಿಗೆ ಸಂಭವಿಸಿದವುಗಳಿಗಾಗಿ ದೇವರಿಗೆ ಸಂತೋಷವಾಗಲಿಲ್ಲ ಎಂಬುದು ನಿಜ. ಸ್ವಾಧೀನ ಪಡಿಸಿಕೊಳ್ಳಲು ಸಿದ್ಧವಾಗಿದ್ದ ದೇಶವನ್ನು ಅವರು ತಮ್ಮದಾಗಿಸಬೇಕೆಂಬುದು ದೇವರ ಅಪೇಕ್ಷೆಯಾಗಿತ್ತು, ಆದರೆ ಅವರು ಮಾಡಿದ ತಪ್ಪು ಆಯ್ಕೆಗಳಿಂದಾಗಿ, ದೇವರ ಯೋಜನೆಯಲ್ಲಿ ಅವರಿಗಾಗಿ ಇರದಿದ್ದ ಒಂದು ಪ್ರದೇಶದಲ್ಲಿ ಅವರು ದೀರ್ಘಕಾಲ ಕಳೆಯಬೇಕಾಯಿತು. ನಮಗಾಗಿ ದೇವರು ಮಾಡಿದ ಮೂಲ ಯೋಜನೆಯಲ್ಲಿ ಇರದ ಒಂದು ಮಾರ್ಗದಲ್ಲಿ ಹೋಗುವ ನಿರ್ಧಾರಗಳನ್ನು ನಾವು ತೆಗೆದುಕೊಂಡಾಗ, ದೇವರು ತನ್ನ ಕರುಣೆಯಿಂದ ಇನ್ನೂ ನಮ್ಮೊಂದಿಗೆ ಇದ್ದು, ನಮಗೆ ಬೇಕಾದದ್ದನ್ನು ಒದಗಿಸಿ, ನಾವು ಆತನಿಗೆ ಕಿವಿಗೊಡುವಾಗ ನಮಗೆ ಬೋಧಿಸಿ, ನಮ್ಮನ್ನು ನಡೆಸುತ್ತಾ ಮುಂದುವರಿಯುತ್ತಾನೆ ಮತ್ತು ನಮ್ಮನ್ನು ಆತನ ಮೂಲ ಯೋಜನೆಗಳಿಗೆ ಮತ್ತು ಉದ್ದೇಶಗಳಿಗೆ ಹಿಂದಿರುಗಿಸುತ್ತಾನೆ.

## ಇತರೆ ಬಲದ ಕ್ರಿಯೆಗಳು ಅಂತಹ ಸಮಯಗಳಿಗೆ ನಮ್ಮನ್ನು ತಳ್ಳುತ್ತವೆ

ಯೋಸೇಫನನ್ನು ಗಮನಿಸಿರಿ. ಅವನ ಅಣ್ಣಂದಿರು ಅವನ ಮೇಲೆ ಹೊಟ್ಟೆಕಿಚ್ಚು ಪಟ್ಟು ಅವನನ್ನು ಗುಲಾಮನಾಗಿ ಮಾಡಿದರು. ತಂದೆಯ ಮನೆಯ ಸುಖ ಸಂಪತ್ತಿನಿಂದ ಗುಲಾಮನಾದದ್ದು ಯೋಸೇಫನಿಗೆ ಸಂಭವಿಸಿದ ಒಂದು ಶೀಘ್ರ ಬದಲಾವಣೆ ಯೋಸೇಫನಿಗೆ ಸಂಭವಿಸಿದ್ದನ್ನು ನೆನಪಿಸಿಕೊಳ್ಳುವುದು ಹೆಚ್ಚು ಕಷ್ಟವಾಗಲಾರದು. ಅವನು ಇದ್ದ ಸಂಸ್ಕೃತಿ ಮತ್ತು ಭಾಷೆಗಳಿಂದ ತಬ್ಬಿಬ್ಬಾಗಿರಬಹುದು. ಇವೆಲ್ಲವುಗಳಲ್ಲಿ ದೇವರು ಎಲ್ಲಿದ್ದಾನೆಂದು ಅವನು ಆಶ್ಚರ್ಯಪಟ್ಟಿರಬಹುದು. (ಸುಳ್ಳು ಆಪಾದನೆಗಳಿಂದಾಗಿ ನೈಜತೆಯಲ್ಲಿ ಸೆರೆ ಮನೆಗೆ ಹಾಕಲ್ಪಟ್ಟಾಗ) ದೇವರು ಅವನಿಗೆ ಕೊಟ್ಟ ಕನಸುಗಳಲ್ಲಿ ದೇವರ ಜ್ಞಾನವನ್ನು ಅವನು ಪ್ರಶ್ನಿಸಿರಬಹುದು. ಇನ್ನೊಬ್ಬನ ಕ್ರಿಯೆಗಳು ಯೋಸೇಫನ ಸಂಕಟವಾಗಿ ಪರಿಣಮಿಸಿತು (ಆದಿಕಾಂಡ 37). ಇಸ್ರಾಯೇಲ್ಯರ ಅರಸನಾಗಿ ಅಭಿಷೇಕಿಸಲ್ಪಟ್ಟು ದಾವೀದನು ಸೌಲನ ತೀವ್ರ ಹೊಟ್ಟೆ ಕಿಚ್ಚಿಗೆ ಗುರಿಯಾದದ್ದನ್ನು ಗಮನಿಸಿರಿ. ಅವನನ್ನು ಕೊಲ್ಲಬೇಕೆಂದಿದ್ದ ಸೌಲನ ಕೈಯಿಂದ ತಪ್ಪಿಸಿಕೊಳ್ಳಲು ದಾವೀದನು ಯಾವಾಗಲೂ ಓಡಿಹೋಗುತ್ತಿದ್ದು ಗವಿಗಳಲ್ಲಿ ಅಡಗಿಕೊಳ್ಳುತ್ತಿದ್ದನು. (1 ಸಮುವೇಲನು 22).

## ಸೈತಾನನು ಎಲ್ಲಾ ತೀಕ್ಷ್ಣತೆಯಿಂದ ನಮಗೆ ವಿರೋಧವಾಗಿ ಬರುತ್ತಾನೆ

ದೇವರು ನಮ್ಮ ಜೀವನಗಳಲ್ಲಿ ಕಾಲಗಳಿಗೆ ಮತ್ತು ಸಮಯಗಳಿಗೆ ಅನುಗುಣವಾಗಿ ಕಾರ್ಯ ನಡೆಸುತ್ತಾನೆ. ಹೋಲಿಸಿದರೆ ಕೆಲವು ಸಮಯಗಳಲ್ಲಿ ವೈರಿಯು ಕೂಡ ಉಳಿದ ಸಮಯಗಳಿಗಿಂತ ಇನ್ನೂ ಹೆಚ್ಚು ತೀಕ್ಷ್ಣತೆಯಿಂದ ನಮಗೆ ವಿರೋಧವಾಗಿ ಬರುತ್ತಾನೆ ಎಂದು ಗಮನಿಸುವುದು ಕುತೂಹಲದಾಯಕವಾಗಿದೆ. ನಮ್ಮ ಜೀವನದಲ್ಲಿ ಕೆಲವು ಸಮಯಗಳಲ್ಲಿ ವೈರಿಯ ಬಾಧೆಯು ತೀಕ್ಷ್ಣವಾಗಿಯೂ ಕೆಲವು ಸಮಯಗಳಲ್ಲಿ ಅದು ಸ್ವಲ್ಪ ಕಡಿಮೆಯಾಗಿಯೂ ಇದ್ದಿರಬಹುದು. ಕಠಿಣ ಯುದ್ಧವು ನಡೆಯುವ ಆ ದಿನದಲ್ಲಿ ಮಾಡಬೇಕಾದದ್ದೆಲ್ಲವನ್ನು ಮಾಡಿ ಜಯಶಾಲಿಗಳಾಗಿ ನಿಲ್ಲುವುದಕ್ಕೆ ಶಕ್ತರಾಗುವಂತೆ ಮಾಡಬೇಕಾದದ್ದನ್ನು ಎಫೆಸದವರಿಗೆ 6 ನಮಗೆ ಬೋಧಿಸುತ್ತದೆ.

''**ಆದುದರಿಂದ ಕಠಿಣ ಯುದ್ಧವು ನಡೆಯುವ ದಿವಸದಲ್ಲಿ ಆ ವೈರಿಗಳನ್ನು ಎದುರಿಸುವುದಕ್ಕೂ ಮಾಡಬೇಕಾದದ್ದೆಲ್ಲವನ್ನು ಮಾಡಿ ಜಯಶಾಲಿಗಳಾಗಿ ನಿಲ್ಲುವುದಕ್ಕೂ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ**'' (ಎಫೆಸದವರಿಗೆ 6:13).

''**ಸೈತಾನನು ಸಕಲವಿಧವಾದ ಶೋಧನೆಯನ್ನು ಮುಗಿಸಿ ಸ್ವಲ್ಪ ಕಾಲ ಆತನನ್ನು ಬಿಟ್ಟು ಹೊರಟು ಹೋದನು**'' (ಲೂಕ 4:13)

ನಾವು ಯೇಸುವಿನ ಜೀವನವನ್ನು ಪರಿಶೀಲಿಸುವಾಗ, ಆತನು ಅಡವಿಯಲ್ಲಿ ಉಪವಾಸ ಮಾಡುತ್ತಿದ್ದಾಗ, ಸೈತಾನನಿಂದ ತೀಕ್ಷ್ಣವಾಗಿ ಶೋಧನೆಗೊಳಗಾದ ಒಂದು ಕಾಲಾವಧಿಯನ್ನು ನೋಡುತ್ತೇವೆ. ವೈರಿಯು ಆ ರೀತಿಯಾಗಿ ಕೆಲಸ ಮಾಡುತ್ತಾನೆ. ಅದೇ ರೀತಿ ನಾವು ಕೂಡ ತೀಕ್ಷ್ಣ ಶೋಧನೆಯ ಕಾಲಗಳನ್ನೂ ಅಷ್ಟು ತೀಕ್ಷ್ಣವಲ್ಲದ ಕಾಲಗಳನ್ನೂ ದಾಟಿ ಹೋಗಬಹುದು.

ಯೋಬನು ಇದಕ್ಕೆ ಒಂದು ಉತ್ತಮ ಉದಾಹರಣೆ, ಯೋಬನು ಒಳ್ಳೆಯವನೂ ದೇವರಲ್ಲಿ ಭಯಭಕ್ತಿಯುಳ್ಳವನೂ ಆಗಿದ್ದಾನೆ ಎಂದು ದೇವರು ಯೋಬನನ್ನು ಸೈತಾನನ ಮುಂದೆ ಹೊಗಳಿದನು. ದೇವರು ಯೋಬನನ್ನು ಆಶೀರ್ವದಿಸಿ ಆತನಿಗೆ ಸಂತೋಷ, ಆರೋಗ್ಯ ಮತ್ತು ಐಶ್ವರ್ಯವನ್ನು ದಯಪಾಲಿಸಿದ್ದರಿಂದ ಯೋಬನು ದೇವರಿಗೆ ನಂಬಿಗಸ್ತನಾಗಿ ಭಯಭಕ್ತಿಯುಳ್ಳವನಾಗಿದ್ದಾನೆ ಎಂದು ಸೈತಾನನು ದೇವರಿಗೆ ಉತ್ತರ ಕೊಟ್ಟನು. ದೇವರು ಕೈ ನೀಡಿ ಅವನ ಸೊತ್ತನ್ನೆಲ್ಲಾ ಅಳಿಸಿಬಿಟ್ಟರೆ ಅವನು ಆತನನ್ನು ದೂಷಿಸಲೇ ದೂಷಿಸುವನು ಎಂದು ದೇವರಿಗೆ ಸವಾಲು ಹಾಕಿದನು. ಹೀಗೆ

ಅವನಿಗೆದ್ದದ್ದೆಲವನ್ನೂ ನಾಶಮಾಡಲು ದೇವರು ಸೈತಾನನಿಗೆ ಅನುಮತಿ ಕೊಟ್ಟನು. ಸೈತಾನನು ಯೋಬನಿಗೆ ವಿರೋಧವಾಗಿ ಬಂದು ಅವನ ಕುಟುಂಬ, ಆರೋಗ್ಯ ಮತ್ತು ಲೌಕಿಕ ಸಂಪತ್ತನ್ನು ನಾಶಮಾಡಿದವನು ದೇವರಲ್ಲಾ, ಸೈತಾನನು ಯೋಬನಿಗೆ ಬಾಧೆ ಸಂಕಟಗಳನ್ನು ತಂದವನು. ಕೆಲವರು ದೇವರು ಮಾಡಿದ್ದೆಂದು ತಿಳಿಯುತ್ತಾರೆ, ಆದರೆ ಅದು ನಿಜವಾಗಿಯೂ ಹಾಗಲ್ಲ.

ನಾವು ಯೋಬನ ಪುಸ್ತಕವನ್ನು ಓದುವಾಗ, ಕರ್ತನು ಅವನಿಗಿದ್ದದ್ದನ್ನೆಲ್ಲಾ ''ಅಳಿಸಿ ಬಿಟ್ಟದ್ದು'' ಅಲ್ಲ, ಆದರೆ ಸೈತಾನನು ''ಅಳಿಸಿಬಿಡುವ'' ಕೆಲಸ ಮಾಡಿದ್ದು. ಆದರೆ ಕಾಲದ ಆ ಒಂದು ವೇಳೆಯಲ್ಲಿ, ಆತ್ಮಿಕ ಮಂಡಲದಲ್ಲಿ ನಿಜವಾಗಿಯೂ ಏನು ನಡೆಯುತ್ತಿತ್ತು ಎಂದು ತಿಳಿಯಲು ಯೋಬನಿಗೆ ಆತ್ಮಿಕ ತಿಳುವಳಿಕೆ ಇರಲಿಲ್ಲ. ಆದುದರಿಂದ ಅವನು, ''ಯೆಹೋವನು (ಕರ್ತನು) ಕೊಟ್ಟನು, ಯೆಹೋವನೇ (ಕರ್ತನೇ) ತೆಗೆದುಕೊಂಡನು'' ಎಂದು ಹೇಳಿದನು (ಯೋಬನು 1:21). ನಾಶಮಾಡಿದವನು ಸೈತಾನನು ಎಂದು ತಿಳಿಯದೆ ಅಜ್ಞಾನದಿಂದ ಯೋಬನು ಹಾಗೆ ಹೇಳಿದನು. ಬುದ್ಧಿಹೀನತೆಯಿಂದ ದೇವರನ್ನು ಖಂಡಿಸಿದನು ಎಂದು ನಾವು ಅವನ ಮೇಲೆ ತಪ್ಪು ಹೊರಿಸಲು ಆಗದು. ಅಧ್ಯಾಯ ಒಂದರ ಪ್ರಾರಂಭದಿಂದ ಹೇಳಲಾದ ಎಲ್ಲವುಗಳ ಬೆಳಕಿನಲ್ಲಿ ನಾವು ಯೋಬನು 1:21,22ನ್ನು ತಿಳಿದುಕೊಳ್ಳಬೇಕು. ಈಗ ನಮಗೆ ಪೂರ್ಣ ಮಾಹಿತಿ, ವಿವರಗಳು ಇವೆ, ಯೋಬನಿಗೆ ಆಗ ಇರಲಿಲ್ಲ. ಯೋಬನ ಪುಸ್ತಕವು ಬೈಬಲ್‌ನ ಅತ್ಯಂತ ಪ್ರಾಚೀನ ಪುಸ್ತಕವಾಗಿದ್ದು, ಮನುಷ್ಯನಿಗೆ ಧರ್ಮಶಾಸ್ತ್ರವು ಕೊಡಲ್ಪಡುವ ಮೊದಲೇ ಬರೆಯಲ್ಪಟ್ಟಿತ್ತು. ಯೋಬನು ಎಲ್ಲಾ ಕಷ್ಟಸಂಕಟಗಳನ್ನು ಅನುಭವಿಸಿ ಆದ ಬಳಿಕ ಅದು ಬರೆಯಲ್ಪಟ್ಟಿತು ಎಂದು ಸ್ಪಷ್ಟವಾಗುತ್ತದೆ. ಯೋಬನ ಪುಸ್ತಕದ ಬರಹಗಾರನು (ಯೋಬ, ಮೋಶೆ ಅಥವಾ ಇನ್ನಾರಾದರೊಬ್ಬನು) ಆತ್ಮಿಕ ಮಂಡಲದಲ್ಲಿ ಏನು ನಡೆಯಿತು ಎಂಬುದರ ಕುರಿತು ಅನಂತರ ಪುಸ್ತಕ ಬರೆಯಲ್ಪಟ್ಟ ಕಾಲದ ಒಂದು ವೇಳೆಯಲ್ಲಿ ಒಂದು ಪ್ರಕಟನೆ ಹೊಂದಿದನು ಎಂದು ಸ್ಪಷ್ಟವಾಗುತ್ತದೆ, ಯೋಬನಿಗೆ ವಿರೋಧವಾಗಿ ಬಂದ ಸೈತಾನನ ಕ್ರಿಯೆಗಳನ್ನು ಅವನು ಎದುರಿಸಿದಾಗ ಅವನಿಗೆ ಇದರ ಕುರಿತು ಹೆಚ್ಚು ಮಟ್ಟಿಗೆ ತಿಳುವಳಿಕೆ ಇರಲಿಲ್ಲ. ಇದು ಯಾವ ರೀತಿಯಲ್ಲೂ ಯೋಬನ ನೀತಿಯ ಜೀವನವನ್ನು ಯಥಾರ್ಥತೆಯನ್ನು ಅಥವಾ ದೇವರ ಮೇಲಣ ಅವನು ಭಯಭಕ್ತಿಯನ್ನು ಕಡಿಮೆಮಾಡಲಿಲ್ಲ. ಹಾಗಿದ್ದಾಗ್ಯೂ, ಇಂದು ನಮಗೆ ಪೂರ್ಣ ದೇವರ ವಾಕ್ಯ ಇರುವುದರಿಂದ ದೇವರ ವಿಷಯಗಳ ಕುರಿತು ಅಜ್ಞಾನದ ನೆಪ ಮಾಡಿಕೊಂಡು ಅಂಥ ಹೇಳಿಕೆಯನ್ನು ಕೊಡಬಾರದು. ದೇವರ ಕಡೆಗೆ ಅವನ

ಹೃದಯವನ್ನು ಕಹಿ ಪಡಿಸಿಕೊಳ್ಳದೆ ಇದ್ದದ್ದು ಯೋಬನ ಕುರಿತ ಒಂದು ಅದ್ಭುತಕರವಾದ ವಿಷಯ. ನಿಜ ವಿಷಯವೆಂದರೆ ದೇವರ ಕಡೆಗೆ ಅವನಿಗೆ ಪರಮ ಬದ್ಧತೆಯಿತ್ತು (ಯೋಬನು 13:15). ಸಂಕಟಗಳನ್ನು ಸಹನೆಯಿಂದ ತಾಳಿಕೊಂಡ ಯೋಬನ ತಾಳ್ಮೆಯನ್ನು ನಾವು ಅನುಕರಿಸಬೇಕೆಂದು ನಮಗೆ ಕರೆಕೊಡಲ್ಪಟ್ಟಿದೆ (ಯಾಕೋಬನು 5:11), ಅಂತ್ಯದಲ್ಲಿ ದೇವರು ನಮಗೆ ಒಳ್ಳೆಯದನ್ನು ಮಾಡುವನೆಂಬ ಭರವಸೆ ನಮಗೆ ಕೊಡಲಾಗಿದೆ. ಯೋಬನು ಕಳಕೊಂಡದ್ದರ ಎರಡರಷ್ಟನ್ನು ದೇವರು ಅವನಿಗೆ ಕೊಟ್ಟನೆಂದು ಯೋಬನ ಪುಸ್ತಕದ ಅಂತ್ಯದಲ್ಲಿ ನೋಡುತ್ತೇವೆ! ಸೌಲನ ಜೀವಿತವನ್ನು ಗಮನಿಸುವಾಗ, ನಾವು ಬೇಕೆಂದೇ ಪಾಪದಲ್ಲಿ ನಡೆಯುವಾಗ ಮತ್ತು ಬಂಡಾಯ ಮಾಡುವಾಗ ಮಾತ್ರ ನಮ್ಮ ಕೈಗಳಲ್ಲಿರುವುದನ್ನು ದೇವರು ತೆಗೆದು ಬಿಡುತ್ತಾನೆ. ದೇವರು ಸೌಲನಿಗೆ ರಾಜ್ಯವನ್ನು ಕೊಟ್ಟನು. ಸೌಲನು, ದೇವರಿಗೆ ಅವಿಧೇಯನಾದನು. ಆದುದರಿಂದ ಸಮುವೇಲನು ಒಂದು ದೇವರು ನಿನ್ನಿಂದ ರಾಜ್ಯವನ್ನು ತೆಗೆದು ಬೇರೆಯವನಿಗೆ ಕೊಡುವನು ಎಂದು ಸೌಲನಿಗೆ ಹೇಳಿದನು (1 ಸಮುವೇಲನು 15:22-28). ದೇವರು ಕಾರಣವಿಲ್ಲದೆ ಏನನ್ನೂ ಯಾರಿಂದಲೂ ತೆಗೆದುಬಿಡುವುದಿಲ್ಲವೆಂದು ನಾವು ತಿಳಿಯಬೇಕು. ನಿಜ ಹೇಳುವುದಾದರೆ, ದೇವರು 'ಕೊಡುವ' ದೇವರಾಗಿದ್ದಾನೆ. ಯಾಕೋಬನು 1:5 ರಲ್ಲಿ ಸ್ಪಷ್ಟವಾಗಿರುವಂತೆ ಆತನು ಉದಾರವಾಗಿ ಕೊಡುವ ದೇವರಾಗಿದ್ದಾನೆ.

**ರಾತ್ರಿಯ ಸಮಯಗಳಿಗೆ ಕಾರಣಗಳೇನು?**

- ದೇವರು ನಮ್ಮ ಮಾರ್ಗವನ್ನು ಅಂಥ ಸಮಯಗಳಿಗೆ ನಡಿಸುತ್ತಾನೆ.
- ನಮ್ಮ ಸ್ವಂತ ಬುದ್ಧಿಹೀನತೆಯಿಂದ (ತಪ್ಪುಗಳಿಂದ / ತಪ್ಪು ಆಯ್ಕೆಗಳಿಂದ ನಾವು ಎಡುವುತ್ತೇವೆ.
- ಇತರರ ಕ್ರಿಯೆಗಳು ನಮ್ಮನ್ನು ಆ ಸನ್ನಿವೇಶಗಳಿಗೆ ತಳ್ಳುತ್ತವೆ.
- ಸೈತಾನನು ಎಲ್ಲಾ ತೀಕ್ಷ್ಣತೆಯಿಂದ ನಮಗೆ ವಿರೋಧವಾಗಿ ಬರುತ್ತಾನೆ.

# 4

# ರಾತ್ರಿಯು ಏಕೆ ಬರುತ್ತದೆ?

ನಾನು ನನ್ನ ಜೀವನವನ್ನು ಪರೀಕ್ಷಿಸಿ ನೋಡಿದರೆ, ನನ್ನ ಜೀವನದಲ್ಲಿ 'ರಾತ್ರಿಯ ಸಮಯ' ಗಳು ಎಂದು ನಿಜವಾಗಿಯೂ ಎದ್ದು ನಿಲ್ಲುವ ಕೆಲವು ಕಾಲಗಳಿದ್ದವು. ಜನವರಿ 1993ರಿಂದ ಸೆಪ್ಟೆಂಬರ್ 1996ರ, ನಾನು ಯು.ಎಸ್.ಎ ಯಲ್ಲಿದ್ದ ಕಾಲ, ಅದೊಂದು ತೀಕ್ಷ್ಣ ಹೋರಾಟದ ಕಾಲಾವಧಿಯಾಗಿತ್ತು. ಇತ್ತೀಚೆಗೆ, ಡಿಸೆಂಬರ್ 2003ರಿಂದ ಜನವರಿ 2004ರ ಮಧ್ಯಕಾಲವು, ನನ್ನ ಉದ್ಯಮವು ಕಠಿಣ ಘಟ್ಟವನ್ನು ದಾಟಿದ ಕಾಲವಾಗಿತ್ತು. ರಾತ್ರಿಯ ಸಮಯಗಳ ನನ್ನ ಪಾಲನ್ನು ನಾನು ದಾಟಿ ಬಂದಿದ್ದೇನೆ. ನಾನು ಹಿಂದಕ್ಕೆ ನೋಡಿ, ಅವುಗಳನ್ನು ಅವಲೋಕಿಸುವಾಗ, ನಮ್ಮ ಜೀವನಗಳಲ್ಲಿ ರಾತ್ರಿಯ ಸಮಯಗಳು ಬರಲು ದೇವರು ಏಕೆ ಬಿಡುತ್ತಾನೆ ಎಂದು ನಾನು ತಿಳಿಯಲು ಪ್ರಾರಂಭಿಸಿದೆನು.

## ಬೋಧನೆಗೆ ಮತ್ತು ತರಬೇತಿಗೆ ಕಾಲ

**''ಯೆಹೋವನು ನನಗೆ ಆಲೋಚನೆಯನ್ನು ಹೇಳಿಕೊಡುತ್ತಾನೆ; ಆತನನ್ನು ಕೊಂಡಾಡುವೆನು. ರಾತ್ರಿ ಸಮಯಗಳಲ್ಲಿ ನನ್ನ ಅಂತರಾತ್ಮವು ನನ್ನನ್ನು ಬೋಧಿಸುತ್ತದೆ''** (ಕೀರ್ತನೆಗಳು 16:17)

ನಾವು ಕಷ್ಟಕಾಲಗಳನ್ನು - ರಾತ್ರಿಯ ಸಮಯಗಳನ್ನು, ದಾಟುವಾಗ ಜೀವನದ ಕೆಲವು ಅಮೂಲ್ಯ ಪಾಠಗಳನ್ನು ಕಲಿಯುತ್ತೇವೆ. ನಾವು ಕಷ್ಟದ ಸನ್ನಿವೇಶಗಳಲ್ಲಿರುವಾಗ ದೇವರು ಯಾವಾಗಲೂ ಅದ್ಭುತಕರವಾಗಿ ಮಧ್ಯ ಪ್ರವೇಶಿಸುವುದಿಲ್ಲ. ನಾವು ಕೆಲವು ಪಾಠಗಳನ್ನು ಕಲಿಯಬೇಕು ಮತ್ತು ಪುನಃ ಅಂಥ ಸನ್ನಿವೇಶಗಳಲ್ಲಿ ಬೀಳಬಾರದು ಎಂದು ಆತನು ಅಪೇಕ್ಷಿಸುತ್ತಾನೆ. ನಾವು ಕಲಿಯಲಿರುವುದನ್ನು ಕಲಿತು ಜಾಣರಾಗುವುದು ನಮಗೆ ಬಿಟ್ಟದ್ದು. ನಮ್ಮಲ್ಲಿ ಕೆಲವರು ಮತ್ತೆ ಮತ್ತೆ ಅಂಥ ಸನ್ನಿವೇಶಗಳಲ್ಲಿ ಬಿದ್ದು ನಮ್ಮ ಪರವಾಗಿ ದೇವರು ಏಕೆ ಏನೂ ಮಾಡುವುದಿಲ್ಲ ಎಂದು ಆಶ್ಚರ್ಯ ಪಡುತ್ತೇವೆ. ನಾವು ನಿಜವಾಗಿಯೂ ಕಲಿಯಬೇಕಾದದ್ದನ್ನು ಕಲಿಯುವವರೆಗೆ ಪ್ರಾಯಶಃ ದೇವರು ನಾವು ಪುನಃ ಪುನಃ ಅಂಥ ಸನ್ನಿವೇಶಗಳನ್ನು ದಾಟಿ ಹೋಗುವಂತೆ ಬಿಡುತ್ತಾನೆ. ದೇವರು ನಮಗೆ ಕಲಿಸಲು ಬಯಸುತ್ತಿರುವ ಪಾಠಗಳನ್ನು ನಾವು ಕಲಿಯುವವರೆಗೆ ನಾವು 'ಪದವೀಧರ'ರಾಗಲಾಗದು ಅಥವಾ ಜೀವನದ ಮುಂದಿನ ಸಮಯಕ್ಕೆ ಹೋಗಲು ಸಾಧ್ಯವಾಗದು..

ಅದು ನಮ್ಮ ತಪ್ಪುಗಳಿಂದ ಕಲಿತ, ಸರಿಯಾದ ರೀತಿಯಲ್ಲಿ ಮಾರ್ಪಾಟುಗೊಳ್ಳಲು ಒಂದು ಕಾಲವಾಗಿದೆ. ನಾವು ತಪ್ಪು ಮಾಡಲು ಬಿಡುವುದು ಸರಿಯಾದದ್ದೇ ಆದರೆ ಅವುಗಳನ್ನು ಪುನಃ ಮಾಡದಂತೆ ನಾವು ಬುದ್ಧಿವಂತರಾಗಬೇಕು. ಒಂದು ತಪ್ಪು ಮಾಡಿದಾಗ, ನಾವು ಅದರಿಂದ ಪಾಠ ಕಲಿತು ತಕ್ಕ ಮುಂಜಾಗ್ರತೆ ತೆಗೆದುಕೊಂಡು, ಪುನಃ ಅವುಗಳನ್ನು ಮಾಡದಂತೆ ಪ್ರಯತ್ನಿಸಬೇಕು. ನಮ್ಮ ಜೀವನದಲ್ಲಿ ಒಂದು ಕತ್ತಲಿನ ಕಾಲಾವಧಿಯನ್ನು ಹೊಕ್ಕುವಾಗ, ನಾವು ಹತಾಶೆಯ ಮನೋಭಾವನೆಯನ್ನು ತಳೆಯದಿರೋಣ. ಅದು ಏಕೆ ಸಂಭವಿಸಿತೆಂದು ದೇವರನ್ನು ಪ್ರಶ್ನಿಸದಿರೋಣ. ಬದಲಾಗಿ, ಕಷ್ಟದ ಸನ್ನಿವೇಶಗಳಿಂದ ಯಾವ ಅಮೂಲ್ಯ ಪಾಠಗಳನ್ನು ಕಲಿಯಬಹುದೆಂದು ಕಂಡುಕೊಳ್ಳೋಣ. ಅನಂತರ ನಮ್ಮ ಜೀವನದಲ್ಲಿ ಅಂಥ ಒಂದು ಸನ್ನಿವೇಶವು ನಮ್ಮನ್ನು ಎದುರಿಸಿದಾಗ ನಾವು ಜಯಶಾಲಿಗಳಾಗಿ ಹೊರಬರುವೆವು.

ನಾವು ಕಲಿಯುವ ಮುಖ್ಯ ಆತ್ಮಿಕ ಒಳನೋಟಗಳಲ್ಲಿ ಕೆಲವು ನಮಗೆ ರಾತ್ರಿಯ ಸಮಯಗಳಲ್ಲಿ ಹೇಳಲ್ಪಡುತ್ತವೆ. ಯೇಸು, ''ನಾನು ಕತ್ತಲಲ್ಲಿ ನಿಮಗೆ ಹೇಳುವುದನ್ನು ನೀವು ಬೆಳಕಿನಲ್ಲಿ ಹೇಳಿರಿ; ಮತ್ತು ಕಿವಿಯಲ್ಲಿ ಕೇಳಿದ್ದನ್ನು ಮಾಳಿಗೆಗಳ ಮೇಲೆ ನಿಂತು ಸಾರಿರಿ'' ಎಂದು ಹೇಳಿದನು (ಮತ್ತಾಯ 10:27). ನಾವು ಮಾಳಿಗೆಗಳ ಮೇಲೆ ನಿಂತು ಸಾರುವ ಮೊದಲು, ಆತನ ಮೆಲುದನಿಗೆ ಕಿವಿಕೊಡುವ ಕಾಲಗಳು ಇದ್ದಿರಬೇಕು. ಅನೇಕ ವೇಳೆ ನಾವು ಅಮೂಲ್ಯ ಪಾಠಗಳನ್ನು ಕಲಿಯುವುದು ನಮ್ಮ ಜೀವನದ ರಾತ್ರಿಯ ಸಮಯಗಳಲ್ಲಿಯೇ. ಕೆಳಗಿನ ವಚನಗಳು ಅಕ್ಷರಶಃ ರಾತ್ರಿಗಳಿಗೆ ಸಂಬಂಧಿಸಿದರೂ, ನಮ್ಮ ಜೀವನದ ಕತ್ತಲಿನ ಸಮಯಗಳಲ್ಲಿ ದೇವರು ನಮ್ಮೊಂದಿಗೆ ಮಾತಾಡುತ್ತಾನೆ ಎಂಬುದು ನಿಜವಾಗಿದೆ.

**'''ನನ್ನ ಸೃಷ್ಟಿಕರ್ತನಾದ ದೇವರು ಎಲ್ಲಿ, ಆತನು ರಾತ್ರಿಯಲ್ಲಿಯೂ ಕೀರ್ತನೆಗಳನ್ನು ಹಾಡಮಾಡುತ್ತಾನಲ್ಲಾ' ಎಂದು ಯಾರೂ ಹೇಳಿಕೊಳ್ಳುವುದೇ ಇಲ್ಲ''** (ಯೋಬನು 35:10)

ನಮ್ಮ ಜೀವನಗಳಲ್ಲಿ ನಾವು ಹಾಡುವ ಹಾಡುಗಳಲ್ಲಿ ಅನೇಕ ಹಾಡುಗಳು ಜೀವನದ ರಾತ್ರಿಯ ಸಮಯಗಳಲ್ಲಿ ಹುಟ್ಟಿಕೊಂಡವುಗಳು.

## ಗುಣ ನಡತೆಯ ಬೆಳವಣಿಗೆಗೆ ಒಂದು ಕಾಲ

ಜೀವನದ ರಾತ್ರಿಯ ಸಮಯಗಳು ಗುಣಸ್ವಭಾವದ ಬೆಳವಣಿಗೆಗೆ ಒಂದು ಕಾಲ ಅದು ದೇವರು ನಮ್ಮನ್ನು ಪುಟಕ್ಕೆ ಹಾಕಿ ನಾವು ಪ್ರೌಢರಾಗುವಂತೆ ಮಾಡುವ ಒಂದು ಕಾಲ.

**‘‘ ಆತನಾದರೋ ನನ್ನ ದಾರಿಯನ್ನು ಬಲ್ಲನು, ಆತನೇ ನನ್ನನ್ನು ಶೋಧಿಸಿ ನೋಡಿದರೆ ಚೊಕ್ಕ ಬಂಗಾರವಾಗಿ ಕಾಣಿಸುವೆನು’’** (ಯೋಬನು 23:10)

ಈ ವಚನಗಳು ನನಗೆ ವಿಶೇಷ ಪ್ರೋತ್ಸಾಹದಾಯಕವಾಗಿದೆ. ‘‘ಆತನಾದರೋ ನನ್ನ ದಾರಿಯನ್ನು ಬಲ್ಲನು’’ ಎಂಬ ಮಾತುಗಳು ನಿಜವಾಗಿಯೂ ನಮ್ಮನ್ನು ಪ್ರೋತ್ಸಾಹಿಸಬೇಕು. ಗುಣನಡತೆಯು ಹೇಗೆ ಬೆಳೆಯುತ್ತದೆ? ಸತ್ಯವೇದ ಸಮ್ಮೇಳನಗಳಿಗೆ ಹೋಗುವುದರಿಂದ ಮಾತ್ರವಲ್ಲ! ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ. ತಾಳ್ಮೆಯಿಂದ ಅನುಭವ ಸಿದ್ಧಿ ಹುಟ್ಟುತ್ತದೆ ಎಂದು ನಮಗೆ ಸತ್ಯವೇದ ಬೋಧಿಸುತ್ತದೆ ‘‘ಇದು ಮಾತ್ರವಲ್ಲದೆ ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಉಲ್ಲಾಸವಾಗಿದ್ದೇವೆ. ಯಾಕೆಂದರೆ ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ. ತಾಳ್ಮೆಯಿಂದ ಅನುಭವ ಸಿದ್ಧಿ ಹುಟ್ಟುತ್ತದೆ. ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆಂದು ಬಲ್ಲೆವು’’ (ರೋಮಾಪುರದವರಿಗೆ 5:3,4). ನಾವು ಉಪದ್ರವಗಳನ್ನು ದಾಟಿ ತಾಳ್ಮೆ (ಸಹನೆ)ಯನ್ನು ವೃದ್ಧಿಸಿಕೊಳ್ಳದಿದ್ದರೆ, ನಮ್ಮಲ್ಲಿ ಬಲವಾದ ಗುಣನಡತೆಗಳಿರಲಾರದು.

ನಾವು ದಾಟಿ ಹೋಗುವ ರಾತ್ರಿಯ ಸಮಯಗಳಲ್ಲಿ ದೇವರು ನಮ್ಮ ಬಲಹೀನ ವಿಷಯಗಳನ್ನು ಸಂಸ್ಕರಿಸಿ ಅವುಗಳನ್ನು ಬಲ, ಸಾಮರ್ಥ್ಯಗಳಾಗಿ ಮಾರ್ಪಡಿಸುತ್ತಾನೆ. ಜೀವನದ ಕತ್ತಲಿನ ಸಮಯಗಳಲ್ಲಿ ದೇವರು ನಮ್ಮಲ್ಲಿರುವ ನಕಾರಾತ್ಮಕವಾದವುಗಳನ್ನು ಸಕಾರಾತ್ಮಕವಾದವುಗಳಾಗಿ ಮಾರ್ಪಡಿಸುತ್ತಾನೆ.

## ಬಲವನ್ನು, ಸಾಮರ್ಥ್ಯವನ್ನು ಬೆಳೆಸಲು ಕಾಲ

ಸಾಮಾನ್ಯವಾಗಿ ನಾವು ಅಂಥ ಕತ್ತಲಿನ ಸಮಯಗಳಲ್ಲಿ ದೇವರಿಂದ ಬಲವನ್ನು ಹೊಂದುತ್ತೇವೆ. ದಾವೀದನು ಯಾರ ದೃಷ್ಟಿಗೂ ಬೀಳದೆ ಕುರಿಗಳನ್ನು ಕಾಯುತ್ತ ಅಜ್ಞಾತದಲ್ಲಿದ್ದನು. ಕುರಿಗಳನ್ನು ಕಾಯುವಾಗ ದೇವರು ಅವನಿಗೆ ಸಿಂಹವನ್ನು ಕರಡಿಯನ್ನು ಕೊಲ್ಲಲು ಸಹಾಯ ಮಾಡಿದನು (1 ಸಮುವೇಲನು 17:34-37). ಈ ಅಜ್ಞಾತ ಕಾಲದಲ್ಲಿ, ಅವನ ಜೀವನದ ಈ ಕತ್ತಲಿನ ಸಮಯದಲ್ಲಿ, ಗೊಲ್ಯಾತನನ್ನು ಕೊಲ್ಲಲು ಬೇಕಾದ ದೇವರಲ್ಲಿನ ಭರವಸೆಯನ್ನು ಅವನು ಬೆಳೆಸಿಕೊಂಡದ್ದು. ದೇವರು ಬರಲು ಬಿಡುವ ನಮ್ಮ ರಾತ್ರಿಯ ಸಮಯಗಳ ಅನುಭವಗಳು ನಮ್ಮನ್ನು ಕಟ್ಟಿ, ದೃಢಪಡಿಸಿ, ಸಿದ್ಧಗೊಳಿಸಿ ಮುಂದೆ ಬರಲಿರುವುದಕ್ಕಾಗಿ ನಮ್ಮನ್ನು ಸನ್ನದ್ಧಗೊಳಿಸುವವು. ಕುರಿಗಳನ್ನು ಕಾಯಲು ದಾವೀದನು ಅಸಹ್ಯಪಡುತ್ತಿದ್ದರೆ, ಅವನು ಸಿಂಹವನ್ನು

ಕರಡಿಯನ್ನೂ ಎದುರಿಸಿ ಅವುಗಳನ್ನು ಕೊಲ್ಲುವ ಸಂದರ್ಭ ಸಿಕ್ಕುತ್ತಿದ್ದದ್ದು ಅಸಂಭವನೀಯ. ಅಂಥ ಕಾಲಗಳಲ್ಲಿ ಸಂದರ್ಭ ದೇವರು ನಮ್ಮ ಬಲ, ಸಾಮರ್ಥ್ಯಗಳನ್ನು ವೃದ್ಧಿಸುತ್ತಾನೆ. ಕೆಲವು ಕದನಗಳನ್ನು ಮಾಡುವುದೇ ಯುದ್ಧ ವೀರನಾಗಲು ಮಾರ್ಗ. ಕೆಲವು ಯುದ್ಧವೀರರಾಗಲಾರೆವು. ''ದೇವರೇ, ಸೈತಾನನನ್ನು ನನ್ನ ಬಳಿ ಬರಲು ಬಿಡಬೇಡ'' ಎಂದು ಹೇಳಿ, ದೇವರಿಗಾಗಿ ವೀರನಾಗಲು ಅಪೇಕ್ಷಿಸಲಾಗದು. ದೇವರ ಸೈನ್ಯದಲ್ಲಿ ಸೇವೆ ಮಾಡಲು ಕೆಲವು ಅನುಭವಸ್ತರಿರುವುದು ಪರಿಣಾಮಕಾರಿ. ಕದನವಿರದೆ ಹೇಗೆ ಜಯವಿರಬಹುದು? ಹೋರಾಟವಿಲ್ಲದೆ ಹೇಗೆ ಬಲವಿರಬಹುದು? ಪರೀಕ್ಷೆಯಿಲ್ಲದೆ ಹೇಗೆ ಸಾಕ್ಷಿ ಇರಬಹುದು? ಕದನಗಳಲ್ಲಿ ಜಯಹೊಂದಿ ಹೊರಬಂದ ಬಳಿಕ, ನಾವೆಲ್ಲರೂ ಎದ್ದು ನಿಂತು ಸಾಕ್ಷಿ ಹೇಳಲು ಸಾಧ್ಯವಾಗುವಂತೆ, ಎಲ್ಲರೂ ಕದನಗಳನ್ನು ಮಾಡಲು ಸಿದ್ಧರಾಗಿರೋಣ.

## ಅಸ್ತಿವಾರ ಹಾಕಲು ಕಾಲ

**''ಇನ್ನೂ ಆತನು, ದೇವರ ರಾಜ್ಯವನ್ನು ಯಾವದಕ್ಕೆ ಹೋಲಿಸೋಣ? ಯಾವ ಸಾಮ್ಯದಿಂದ ಅದನ್ನು ತೋರಿಸಿಕೊಡೋಣ? ಅದು ಸಾಸಿವೆಕಾಳಿನಂತಿರುತ್ತದೆ. ಭೂಮಿಯಲ್ಲಿ ಬಿತ್ತುವಾಗ ಅದು ಭೂಮಿಯಲ್ಲಿರುವ ಎಲ್ಲಾ ಬೀಜಗಳಿಗಿಂತಲೂ ಸಣ್ಣದಾಗಿದೆ. ಬಿತ್ತಿದ ಮೇಲೆ ಅದು ಬೆಳೆದು ಎಲ್ಲಾ ಕಾಯಿಪಲ್ಯದ ಗಿಡಗಳಿಗಿಂತ ದೊಡ್ಡದಾಗಿ ದೊಡ್ಡ-ದೊಡ್ಡ ಕೊಂಬೆಗಳನ್ನು ಬಿಡುವುದರಿಂದ ಆಕಾಶದಲ್ಲಿ ಹಾರಾಡುವ ಹಕ್ಕಿಗಳು ಅದರ ನೆರಳಿನಲ್ಲಿ ವಾಸ ಮಾಡುವದಕ್ಕಾಗುತ್ತದೆ ಎಂದು ಹೇಳಿದನು''** (ಮಾರ್ಕ 4:30-32)

ಬೀಜವು ಭೂಮಿಯಲ್ಲಿರುವಾಗ ಮೊಳೆಯುತ್ತದೆ. ನೋಡುವವನಿಗೆ ಅದು ಸ್ಪಷ್ಟವಾಗಿ ಕಾಣದಿದ್ದರೂ ಅದರಲ್ಲಿ ಕೆಲವು ಮಾರ್ಪಾಟುಗಳಾಗುತ್ತವೆ. ನಮ್ಮ ಜೀವನದ ರಾತ್ರಿಯ ಸಮಯಗಳು, ಏನೂ ಸಂಭವಿಸುತ್ತಿರುವುದಿಲ್ಲ ಎಂದು ಕಂಡರೂ, ಅದನ್ನು ಮೊಳಕೆಯೊಡೆಯುವ ಕಾಲಾವಧಿಗೆ ಹೋಲಿಸಬಹುದು. ಸುಪ್ತಾವಸ್ಥೆಯಲ್ಲಿದ್ದ ಬಳಿಕ, ಬೀಜದ ಹೊರ ಸಿಪ್ಪೆಯು ಒಡೆದು ಬೇರು ಮತ್ತು ಕೊಂಬೆ ಮೊಳೆಯುತ್ತದೆ. ಜೆಕರ್ಯ 4:10 ಕೊನೆಯ ಭಾಗವು, '' ಹೀಗಿರುವಲ್ಲಿ ಅಲ್ಪ ಕಾರ್ಯಗಳ ದಿನವನ್ನು ಯಾರು ತಿರಸ್ಕರಿಸಾರು?'' ಎಂದು ಹೇಳುತ್ತದೆ. (ಜೆಕರ್ಯ 4:10) ಅಲ್ಪ ವಿಷಯಗಳ ಪ್ರಾರಂಭದ ದಿನವನ್ನು ನಾವು ಯಾರೂ ತಿರಸ್ಕರಿಸಬಾರದು. ಹಿಂದಕ್ಕೆ ತಿರುಗಿ ನೋಡಿದಾಗ, ಈ ಸಭೆಯು ನನ್ನ ತಂದೆಯ ಮನೆಯ ಒಂದು ಕೋಣೆಯಲ್ಲಿ ಎಂಟು ಜನರು ಮಾತ್ರ ಇದ್ದು ಫೆಬ್ರವರಿ 18, 2001ರಂದು ಪ್ರಾರಂಭವಾದದ್ದು ಜ್ಞಾಪಕವಾಗುತ್ತದೆ. ಈಗ ನಾವು ನೋಡುವಂತೆ, ಒಂದು ದೊಡ್ಡ ಸಭಾಂಗಣದಲ್ಲಿ

ಅನೇಕ ಜನರು ಮಂದಿ ಕೂಡಿ ಬರುವೆವೆಂದು ನಾವು ನೆನಸಿರಲಿಲ್ಲ! ದೇವರ ರಾಜ್ಯದಲ್ಲಿ ಮಹಾಕಾರ್ಯಗಳಿಗೆ ಸಾಮಾನ್ಯವಾಗಿ ಸಣ್ಣ ಪ್ರಾರಂಭಗಳಿರುವುವು. ಹಾಗಿದ್ದಾಗ್ಯೂ, ನಾವು ಅಜ್ಞಾತದಿಂದ ಬೆಳಕಿಗೆ ಬರುವ ಮೊದಲು, ನಮಗೆ ಅಸ್ತಿವಾರ ಹಾಕುವ ಕಾಲವಾದ ಮೊಳಿಕೆ ಬರುವ ಕಾಲಾವಧಿಯನ್ನು ದಾಟಲು ತಾಳ್ಮೆಯು ಬೇಕು.

ಪರೀಕ್ಷೆಯಿಲ್ಲದೆ ಸಾಕ್ಷಿಯಿಲ್ಲ

ಕದನವಿಲ್ಲದೆ ಜಯವಿಲ್ಲ

ಹೋರಾಟವಿಲ್ಲದೆ ಬಲವಿಲ್ಲ

# 5

# ಎಲ್ಲವೂ ಕತ್ತಲಾದಾಗ ದೇವರು ಎಲ್ಲಿದ್ದಾನೆ?

**''ಇಗೋ, ಇಸ್ರಾಯೇಲ್ಯರನ್ನು ಕಾಯುವಾತನು ತೂಕಡಿಸುವದಿಲ್ಲ, ನಿದ್ರಿಸುವುದಿಲ್ಲ''** (ಕೀರ್ತನೆಗಳು 121:4)

**''ಹಗಲಿರುಳುಗಳಿಗೆ ನಿಯಾಮಕನು ನೀನು; ಸೂರ್ಯಾದಿ ಜ್ಯೋತಿರ್ಮಂಡಲಗಳ ನಿರ್ಮಾಣಿಕನು ನೀನು''** (ಕೀರ್ತನೆಗಳು 74:16)

**''ಆತನು ಅಗಾಧ ವಿಷಯಗಳನ್ನೂ ಗೂಢಾರ್ಥಗಳನ್ನೂ ಬೈಲಿಗೆ ತರುತ್ತಾನೆ; ಕಗ್ಗತ್ತಲೆಯಲ್ಲಿ ಅಡಗಿರುವದೂ ಆತನಿಗೆ ಗೋಚರ; ತೇಜಸ್ಸು ಆತನಲ್ಲೇ ನೆಲೆಗೊಂಡಿದೆ?''** (ದಾನಿಯೇಲನು 2 :22)

**''ದೇವರು ನಮಗೆ ಆಶ್ರಯ ದುರ್ಗವಾಗಿದ್ದಾನೆ. ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು. ಆದದರಿಂದ ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲಿ ಮುಳುಗಿ ಹೋದರೂ ನಮಗೇನೂ ಭಯವಿಲ್ಲ''** (ಕೀರ್ತನೆಗಳು 46 : 1, 2)

**'' ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು?ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ?''** (ರೋಮಾಪುರದವರಿಗೆ 8:35)

ಜೀವನದ ರಾತ್ರಿಯ ಸಮಯಗಳಲ್ಲಿ, ದೇವರು ಮಿಲಿಯನ್‌ಗಟ್ಟಲೆ ಮೈಲು ದೂರದಲ್ಲಿದ್ದಾನೆ ಎಂಬಂತೆ ಕಾಣುವಾಗ, ನಮ್ಮ ಮನಸ್ಸುಗಳಲ್ಲಿ ಸಾಮಾನ್ಯವಾಗಿ ಬರುವ ಪ್ರಶ್ನೆ ''ದೇವರು ನನಗೆ ಅತ್ಯಗತ್ಯವಾಗಿ ಬೇಕಾಗಿರುವಾಗ ಆತನು ಎಲ್ಲಿದ್ದಾನೆ?''ಎಂಬುದು ದೇವರ ವಾಕ್ಯವೊಂದೇ ನಮ್ಮ ಭರವಸೆ. ಆತನು ತೂಕಡಿಸುವುದಿಲ್ಲ, ನಿದ್ರಿಸುವುದಿಲ್ಲ ಎಂದು ದೇವರ ವಾಕ್ಯವು ನಮಗೆ ಭರವಸೆ ಕೊಡುತ್ತದೆ. ದೇವರು ನಿಮ್ಮ ಜೀವನಗಳಲ್ಲಿ ಕೆಲಸ ಮಾಡುತ್ತಿರುವಾಗ ವಿಶ್ರಮಿಸುವುದಿಲ್ಲ. ರಜೆ ತೆಗೆದುಕೊಳ್ಳುವುದಿಲ್ಲ!! ದೇವರು ಇನ್ನೂ ಕೆಲಸ ಮಾಡುತ್ತಾ ಇದ್ದಾನೆ. 'ರಾತ್ರಿ' ಮತ್ತು 'ಹಗಲು' ಎರಡೂ ದೇವರಿಗೆ ಸಮಾನ. ಅವೆರಡನ್ನೂ ಆತನು ಮಾಡಿದನು. ಏನು ನಡೆಯುತ್ತಾ ಇದೆ ಎಂದು ನಿಮಗೆ ಅರಿಯಲಾಗದೆ ಇರುವಾಗಲೂ, ನಿಮ್ಮ ರಾತ್ರಿಯು ಸಮಯದಿಂದ ಹೊರಬರುವ ದಾರಿ ತೋಚದಿರುವಾಗಲೂ, ಕತ್ತಲಲ್ಲಿ ಏನಿದೆ ಎಂದು ಆತನು ತಿಳಿದಿದ್ದಾನೆ ಎಂಬ

ಭರವಸೆದಿಂದಿರಿ. ಆತನಲ್ಲಿ ಬೆಳಕಿದೆ. ಆತನು ಹೊರಬರುವ ದಾರಿಯನ್ನು ತಿಳಿದಿದ್ದಾನೆ! ದೇವರು ''ಇಕ್ಕಟ್ಟಿನಲ್ಲಿ ವಿಶೇಷ ಸಹಾಯಕನು,'' ಎಂದರೆ ನಿಮ್ಮ ಕಷ್ಟಕರ ಸನ್ನಿವೇಶದಲ್ಲಿ ಆತನು ನಿಮ್ಮೊಂದಿಗಿದ್ದಾನೆ ಎಂದರ್ಥ. ಆತನು ಅಲ್ಲೇ ನಿಮ್ಮೊಂದಿಗಿದ್ದಾನೆ. ದೇವರ ಪ್ರೀತಿಯಿಂದ ನಿಮ್ಮನ್ನು ಅಗಲಿಸಲಾಗುವ ಯಾವ ಪರಿಸ್ಥಿತಿಯಾಗಲಿ ಸನ್ನಿವೇಶವಾಗಲಿ ಎಂದೂ ಇಲ್ಲ. ನಿಮ್ಮ ಮೇಲಿನ ಆತನ ಪ್ರೀತಿಯು ಆತನು ತನ್ನ ಒಬ್ಬನೇ ಮಗನನ್ನು ನಿಮಗೋಸ್ಕರವಾಗಿ ಸಾಯಲು ಕೊಟ್ಟ ದಿನದಲ್ಲಿ ಎಷ್ಟು ಬಲವಾಗಿತ್ತೂ, ಎಷ್ಟು ನಿಜವಾಗಿತ್ತೋ, ಎಷ್ಟು ತೀಕ್ಷ್ಣವಾಗಿತ್ತೋ ಅಷ್ಟೇ ಇದೆ. ಇಂದು ಆತನು ನಿಮ್ಮನ್ನು ಅದಕ್ಕಿಂತ ಕಡಿಮೆ ಪ್ರೀತಿಸುವುದಿಲ್ಲ!

# 6

# ನಾವು ಮಧ್ಯರಾತ್ರಿಯಲ್ಲಿ ಏನು ಮಾಡುತ್ತೇವೆ?

ನಾವು ಜೀವನದ ರಾತ್ರಿಯ ಸಮಯಗಳನ್ನು ದಾಟುವಾಗ ಮಾಡಬಹುದಾದ ಕೆಲವು ವಿಷಯಗಳು ಇಲ್ಲಿವೆ.

## ನಮ್ಮ ಹೃದಯಗಳು ಕರ್ತನಿಗೆ ಭಕ್ತಿಯಿಂದಿರುವುದು

''ಆಹಾ, ಆತನು ನನ್ನನ್ನು ಕೊಲ್ಲುವನು, ಅದಕ್ಕಾಗಿ ಕಾದಿರುತ್ತೇನೆ, ಆದರೂ ನನ್ನ ನಡತೆಯ ಒಳ್ಳೇತನವನ್ನು ಆತನ ಮುಂದೆ ಸ್ಥಾಪಿಸುವೆನು'' (ಆತನು ನನ್ನನ್ನು ಕೊಂದರೂ, ಆತನಲ್ಲಿ ಭರವಸೆದಿಂದಿರುವೆನು) ಎಂಬ ಬಲವಾದ ಹೇಳಿಕೆಯನ್ನು ಯೋಬನು ಮಾಡಿದನು (ಯೋಬನು 13:15). ಕರ್ತನ ಮೇಲಿನ ನಮ್ಮ ಬದ್ಧತೆಯು ಹೀಗೆ ತೀಕ್ಷ್ಣವಾಗಿರಬೇಕು. ಯೋಬನಿಗೆ ಅವನಿಗೆ ನಡೆಯುತ್ತಿರುವವುಗಳ 'ಏಕೆಗಳು' ಮತ್ತು 'ಯಾವಾಗಗಳು' ತಿಳಿಯದಿದ್ದರೂ, ''ಆತನಾದರೋ ನನ್ನ ದಾರಿಯನ್ನು ಬಲ್ಲನು, ಆತನೇ ನನ್ನನ್ನು ಶೋಧಿಸಿ ನೋಡಿದರೆ ಚೊಕ್ಕ ಬಂಗಾರವಾಗಿ ಕಾಣಿಸುವೆನು'' ಎಂದು ಹೇಳಲು ಅವನಲ್ಲಿ ಬಲವಿತ್ತು (ಯೋಬನು 23:10) ನಿಮಗೆ ಎಲ್ಲವೂ ತಿಳಿಯದಾಗಲೂ ಕರ್ತನಿಗೆ ನಂಬಿಗಸ್ತರಾಗಿ ನಿಲ್ಲಿರಿ! ಆತನಿಗೆ ನಿಮ್ಮ ಹೃದಯವನ್ನು ಭಕ್ತಿಯಿಂದ ಇರಿಸಿಕೊಳ್ಳಿರಿ. ಏನಾದರೂ ಆತನನ್ನು ಪ್ರೀತಿಸುತ್ತಾ ಮುಂದುವರಿಯಿರಿ. ನಮ್ಮ ಜೀವನದ ಸಮಯಗಳು ಮಾರ್ಪಡುವವು ಆದರೆ ದೇವರು ಎಂದು ಮಾರ್ಪಡುವುದಿಲ್ಲ. ಹೀಗಿರಲು ನಾವು ಆತನಿಗೆ ಭಕ್ತಿಯಿಂದ ಇರೋಣ.

## ನಮ್ಮ ತುಟಿಗಳಿಂದ ಆತನನ್ನು ಸ್ತುತಿಸುತ್ತಿರುವುದು

ನಾವು ಕಷ್ಟ ಕಾಲವನ್ನು ದಾಟಿ ಹೋಗುತ್ತಿದ್ದರೂ ನಮ್ಮ ಮುಖಗಳು ಕಳೆಗುಂದದಿರಲಿ. ದೇವರು ಇನ್ನೂ ಸಿಂಹಾಸನಾಸೀನನಾಗಿದ್ದಾನೆ ಮತ್ತು ನಾವು ಆತನನ್ನು ಸ್ತುತಿಸುವಂತಿದ್ದೇವೋ ಇಲ್ಲವೋ, ಆತನು ನಮ್ಮ ಸರ್ವಸ್ತುತಿ ಪಾತ್ರನು. ಹಬಕ್ಕೂಕ 3:17,18, ''ಆಹಾ, ಅಂಜೂರವು ಚಿಗುರದಿದ್ದರೂ ದ್ರಾಕ್ಷಾಲತೆಗಳಲ್ಲಿ ಹಣ್ಣು ಸಿಕ್ಕದಿದ್ದರೂ ಎಣ್ಣೆ ಮರಗಳ ಉತ್ಪತ್ತಿಯು ಶೂನ್ಯವಾದರೂ ಹೊಲಗದ್ದೆಗಳು ಆಹಾರವನ್ನು ಕೊಡದೆ ಹೋದರೂ ಹಿಂಡು ಹಟ್ಟಿಯೊಳಗಿಂದ ನಾಶವಾದರೂ

ಮಂದೆಯು ಕೊಟ್ಟಿಗೆಗಳೊಳಗೆ ಇಲ್ಲದಿದ್ದರೂ ನಾನು ಯೆಹೋವನಲ್ಲಿ ಉಲ್ಲಾಸಿಸುವೆನು, ನನ್ನ ರಕ್ಷಕನಾದ ದೇವರಲ್ಲಿ ಆನಂದಿಸುವೆನು'' ಎಂದು ಹೇಳುತ್ತದೆ. ಈಗ ಇದು ಮಾಡಬೇಕಾದ ಅಂತಿಮ ಬದ್ಧತೆ! (ಇಂಗ್ಲಿಷ್‌ನ) 'J(ಜೆ)' 'Jesusಗೂ (ಯೇಸುವಿಗೂ)', 'Y (ವೈ)' 'you (ನಿಮಗೂ)' ಮಧ್ಯದ 'O (ಒ)' ಏನೂ ಇಲ್ಲದ ಶೂನ್ಯಕ್ಕೂ ಸಂಬಂಧಿಸಿವೆ. Joy (ಜಾಯ್) ಆನಂದವು ನಿಮ್ಮ ಮತ್ತು ಯೇಸುವಿನ ಸಂಬಂಧವನ್ನು ಮಾತ್ರ ಆಧರಿಸಿದೆ ಹೊರತು ನಿಮ್ಮ ಪರಿಸ್ಥಿತಿಗಳನ್ನಲ್ಲ. ಯೇಸುವಿನೊಂದಿಗಿನ ನಮ್ಮ ಸಂಬಂಧವಲ್ಲದೆ ಮತ್ತೇನೂ ಇಲ್ಲದಿದ್ದರೂ ನಮ್ಮ ಜೀವನಗಳಲ್ಲಿ ಆನಂದವು ಒಂದು ನೈಜತೆಯಾಗಿರಬೇಕು.

''ನಾನು ಯೆಹೋವನನ್ನು ಎಡೆಬಿಡದೆ ಕೊಂಡಾಡುವೆನು; ಆತನ ಸ್ತೋತ್ರವು ಯಾವಾಗಲೂ ನನ್ನ ಬಾಯಲ್ಲಿರುವುದು'' (ಕೀರ್ತನೆಗಳು 34:1). ಒಳ್ಳೇ ಕಾಲಗಳನ್ನು ದಾಟಿ ಹೋಗುತ್ತಿರುವಾಗ ಮಾತ್ರವಲ್ಲದೆ ಎಲ್ಲಾ ಕಾಲಗಳಲ್ಲಿಯೂ ನಾವು ಕರ್ತನನ್ನು ಸ್ತುತಿಸಬೇಕು. ಕಷ್ಟದ ಕಾಲಗಳನ್ನು ಹಾದು ಹೋಗುವಾಗಲೂ ನಾವು ಕರ್ತನನ್ನು ಕೊಂಡಾಡಬೇಕು. ನಾವು ಅತ್ಯಂತ ಕಠಿಣ ಕಾಲಗಳನ್ನು ದಾಟಿ ಹೋಗುವಾಗ ದೇವರನ್ನು ಅತ್ಯಂತ ಅಧಿಕವಾಗಿ ಸ್ತುತಿಸುವೆವು ಎಂಬ ಬದ್ಧತೆಯನ್ನು ಮಾಡಿಕೊಳ್ಳೋಣ.

## ಕಲಿತದ್ದರಂತೆ ಜೀವಿಸುವುದು

ನಾವು ನಿಜವಾಗಿ ಯಾರಾಗಿದ್ದೇವೆ, ಯಾವುದನ್ನು ದೃಢವಾಗಿ ನಂಬಿದ್ದೇವೆ ಮತ್ತು ನಾವು ಯಾವುದರಿಂದ ಮಾಡಲ್ಪಟ್ಟಿದ್ದೇವೆ ಎಂಬುದು ಒಳ್ಳೆಯ ಮತ್ತು ಸುಖದ ಸಮಯಗಳಲ್ಲಿ ಅಲ್ಲ ಆದರೆ ಜೀವನದ ಕಷ್ಟದ ಮತ್ತು ಕಠಿಣ ಸಮಯಗಳಲ್ಲಿ ಕಂಡು ಬರುತ್ತದೆ. ನಾವು ನಿಜವಾಗಿಯೂ ಯಾವುದರಿಂದ ಮಾಡಲ್ಪಟ್ಟಿದ್ದೇವೆ ಎಂಬುದನ್ನು ಬೆಂಕಿಯು ಶೋಧಿಸಿ ಬೆಳಕಿಗೆ ತರುತ್ತದೆ. ಎಲ್ಲವೂ ಸರಿಯಾಗಿರುವಾಗ ''ಹಲ್ಲೆಲೂಯ'' ''ಕರ್ತನಿಗೆ ಸ್ತೋತ್ರವಾಗಲಿ'' ಎನ್ನುವುದು ಕಷ್ಟವಲ್ಲ. ನಾವು ಒಂದು ಕಷ್ಟದ ಸನ್ನಿವೇಶದಲ್ಲಿರುವಾಗ ನಮ್ಮ ಬಾಯಿಂದ ಯಾವ ಮಾತುಗಳು ಬರುವುವು ಎಂದು ನೋಡುವುದು ಕುತೂಹಲಕಾರಿಯಾಗಿದೆ. ಯಾಕೋಬನು 1:22 ಹೇಳುವಂತೆ, ನಾವು ವಾಕ್ಯವನ್ನು ಕೇಳುವವರು ಮಾತ್ರವೇ ಆಗಿರದೆ ವಾಕ್ಯದ ಪ್ರಕಾರ ನಡೆಯುವವರೂ ಆಗಿರೋಣ, ಇಲ್ಲಿ ನಾವು ಕಲಿತದ್ದರಂತೆ ಜೀವಿಸಲು ಸಹಾಯವಾಗುವ ಕೆಲವು ಪ್ರಾಯೋಗಿಕ ಸಲಹೆಗಳಿವೆ.

## ನಮ್ಮ ವಿಶ್ವಾಸಕ್ಕೂ ನಾವು ಮಾಡಿದ ಪ್ರತಿಜ್ಞೆಗೂ ನಿಶ್ಚಂಚಲರಾಗಿರುವುದು

**''ನಮ್ಮ ನಿರೀಕ್ಷೆಯನ್ನು ಕುರಿತು ನಾವು ಮಾಡಿದ ಪ್ರತಿಜ್ಞೆಯನ್ನು ನಿಶ್ಚಂಚಲರಾಗಿ ಪರಿಗ್ರಹಿಸೋಣ; ವಾಗ್ದಾನ ಮಾಡಿದಾತನು ನಂಬಿಗಸ್ತನು''** (ಇಬ್ರಿಯರಿಗೆ 10:23)

ದೃಢವಾಗಿ ನಿಲ್ಲಿರಿ! ಭದ್ರವಾಗಿ ಹಿಡಿದುಕೊಳ್ಳಿರಿ! ಆತನು ನಂಬಿಗಸ್ತನು! ನಾನು ಯು.ಎಸ್.ಎ. ಗೆ ಹೋಗುವ ಮೊದಲು ಭಾರತದ ಜನರಿಗೆ ವಿಶ್ವಾಸದ ಕುರಿತು ಕಲಿಸುತ್ತಿದ್ದೆನು. ದೇವರ ಒಳ್ಳೆಯತನ ಮತ್ತು ಸಂತೋಷವಾಗಿ ವಾಸಿಮಾಡುವ ಸಾಮರ್ಥ್ಯ ನಾನು ವಿಶ್ವಾಸದಿಂದ ಕೂಡ ಸೇವೆ ಮಾಡಿದೆನು. ನಾನು ಯು.ಎಸ್.ಎ.ಗೆ ತಲುಪಿದ ಸ್ವಲ್ಪ ಸಮಯದಲ್ಲೇ, ನಾನು ನೆನಸಿದಂತೆ ಅದು ಹಾಲೂ ಜೇನು ಹರಿಯುವ ದೇಶವಾಗಿರಲಿಲ್ಲ ಎಂದು ತಿಳಿದೆನು! ಬದಲಾಗಿ ನನ್ನ ಜೀವನದ ಅತ್ಯಂತ ಕತ್ತಲಿನ ಕಾಲಾವಧಿಗಳಲ್ಲಿ ಒಂದಾದ ಘಟ್ಟವನ್ನು ಪ್ರವೇಶಿಸಿದ್ದೆನು. ಆಹಾರವನ್ನು ಕೊಂಡು ತಿನ್ನುವುದಕ್ಕೆ ಹಣವಿಲ್ಲದ ಕಾಲಗಳಿದ್ದವು. ಹಾಗಿದ್ದಾಗ್ಯೂ, ನನ್ನ ಜೀವನದ ಆ ಕಾಲಾವಧಿಯಲ್ಲಿ ನನ್ನ ಅನುಭವಕ್ಕೆ ಒಪ್ಪುವ ರೀತಿಯಲ್ಲಿ ನನ್ನ ವೇದಶಾಸ್ತ್ರವನ್ನು ಇನ್ನೂ ಬಲವಾಗಿ ಹಿಡಿದುಕೊಂಡೆನು. ಕರ್ತನು ನನ್ನ ಕುರುಬನು ಕೊರತೆಪಡೆನು ಎಂದು ಇನ್ನೂ ನಂಬಿದೆನು. ನನ್ನ ದೇವರು ಕ್ರಿಸ್ತಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನನ್ನ ಪ್ರತಿಯೊಂದು ಕೊರತೆಯನ್ನು ನೀಗಿಸುವನು ಎಂದು ಇನ್ನೂ ನಂಬಿದೆನು. ನನ್ನ ಕೈ ಕೆಲಸವನ್ನು ಆತನು ಆಶೀರ್ವದಿಸುವನು ಎಂದು ಇನ್ನೂ ನಂಬಿದೆನು. ನನ್ನ ಪರಿಸ್ಥಿತಿಗಳು ಕೆಟ್ಟದ್ದಾಗಿರಬಹುದು ಆದರೆ ಪರಿಶುದ್ಧ ಗ್ರಂಥಗಳು ಸತ್ಯವಾದವುಗಳು. ಹೀಗೆ ನಾನು ದೇವರ ವಾಕ್ಯವನ್ನು ಗಟ್ಟಿಯಾಗಿ ಹಿಡಿದುಕೊಂಡು, ''ಇದು ದೇವರ ವಾಕ್ಯವೆಂದು ನಾನು ನಂಬುತ್ತೇನೆ ಮತ್ತು ಇದು ನಿಜವಾಗಿ ನೆರವೇರುವುದು'' ಎಂದು ಹೇಳಿದನು.

ನಾನು ದೇವರ ವಾಕ್ಯವನ್ನು ನಂಬುತ್ತಾ ಮುಂದುವರಿದಂತೆ, ನನ್ನ ಜೀವನದಲ್ಲಿ ವಿಷಯಗಳು ಸಂಭವಿಸುವುದನ್ನು ನಾನು ನೋಡಲು ಪ್ರಾರಂಭಿಸಿದೆನು ಮತ್ತು ದೇವರು ಕ್ರಮಗತವಾಗಿ ನನ್ನನ್ನು ಮೇಲಕ್ಕೆತ್ತಿದನು. ನನ್ನ ಜೀವನದಲ್ಲಿ ಏನೂ ಇಲ್ಲದಿರುವಾಗಲೇ, ಭಾರತಕ್ಕೆ ಹಿಂದಿರುಗಿ ಬಂದು ರಾಷ್ಟ್ರಗಳ ಮೇಲೆ ಪ್ರಭಾವ ಬೀರುವ ಬಲವಾದ ಸಭೆಗಳನ್ನು ಸ್ಥಾಪಿಸುವುದನ್ನು ಮನಸ್ಸಿನಲ್ಲೆಯೇ ರೂಪಿಸಿಕೊಂಡು ದಿಟ್ಟಿಸಿ ನೋಡಿದೆನು. ಈ ವ್ಯತ್ಯಾಸವನ್ನುಂಟು ಮಾಡಿದ ಒಂದೇ ವಿಷಯವು ದೇವರ ವಾಕ್ಯವೇ. ಹೀಗೇ ಇಂದು ಯಾರಾದರೊಬ್ಬರು 'ನಂಬಿಕೆ'ಯನ್ನು ಬೋಧಿಸುವಾಗ ಸಂದೇಹ ಪಟ್ಟು

‘ದೇವರಲ್ಲಿ ನಂಬಿಕೆಯನ್ನಿಡುವುದು’ ನಿಜವಾಗಿಯೂ ಕಾರ್ಯ ನಡಿಸುತ್ತದೋ ಎಂದು ಪ್ರಶ್ನಿಸಿದಲ್ಲಿ ನಾನು ‘‘ನಿಶ್ಚಯವಾಗಿ’’ ಎಂದು ಉತ್ತರ ಕೊಡುವೆನು. ಈ ಸೂತ್ರಗಳನ್ನು ನಾನು ನನ್ನ ಜೀವನದಲ್ಲಿ ಜೀವಿಸಿ ನೋಡಿದ್ದೇನೆ. ಅದು ನಿಜವೆಂದು ರುಜುಮಾಡಲ್ಪಟ್ಟದೆ, ಸಾಕ್ಷೀಕರಿಸಲ್ಪಟ್ಟಿದೆ. ಈ ಸೂತ್ರಗಳನ್ನು ನಾನು ತಾತ್ವಿಕವಾಗಿ ಒಂದು ವೇದಶಾಲೆಯಲ್ಲಿ ಅಥವಾ ಒಂದು ಪುಸ್ತಕವನ್ನು ಓದಿ ಕಲಿತದ್ದಲ್ಲ. ಅವುಗಳನ್ನು ನಾನು ನನ್ನ ಜೀವನದಲ್ಲಿ ಜೀವಿಸಿ, ಅನ್ವಯಿಸಿ, ನೋಡಿದ್ದೇನೆ. ನಾನು ಏಕೆ ‘ಸಮೃದ್ಧಿ’ಯು ಕುರಿತು ಕಲಿಸುತ್ತೇನೆ ಎಂದು ಒಬ್ಬರು ಪ್ರಶ್ನಿಸಿ ಅದಕ್ಕೆ ವ್ಯತಿರಿಕ್ತವಾದದ್ದನ್ನು ನನಗೆ ಖಚಿತ ಪಡಿಸಲು ಬಂದರೆ ನನಗೆ ಅದು ಖಚಿತವಾಗಲಾರದು. ಒದಗಿಸುವಿಕೆಯ ಕ್ಷೇತ್ರದಲ್ಲಿ ದೇವರ ವಾಕ್ಯಕ್ಕೆ ಆತನ ನಂಬಿಗಸ್ತಿಕೆಯನ್ನು ನಾನು ಅನುಭವಿಸಿದ್ದೇನೆ. ಆತನ ವಾಕ್ಯವು ರುಜುವಾದದ್ದು. ನೀವು ನಿಮ್ಮ ಜೀವನದ ರಾತ್ರಿಯ ಸಮಯವನ್ನು ದಾಟುವಾಗ ಮಾಡಬೇಕಾದದ್ದು ಇದೇ ನಿಮ್ಮ ನಂಬಿಕೆಗೆ ನೀವು ಮಾಡಿದ ಪ್ರತಿಜ್ಞೆಯಲ್ಲಿ ನಿಶ್ಚಂಚಲರಾಗಿರಿ.

## ನಂಬಿಕೆಯ ಶ್ರೇಷ್ಠ ಹೋರಾಟವನ್ನು ಮಾಡುವುದು

**ನಂಬಿಕೆಯ (ವಿಶ್ವಾಸದ) ಶ್ರೇಷ್ಠ ಹೋರಾಟವನ್ನು ಮಾಡುವುದು ‘‘ಕ್ರಿಸ್ತನಂಬಿಕೆಯುಳ್ಳವರು ಮಾಡ ತಕ್ಕ ಶ್ರೇಷ್ಠ ಹೋರಾಟವನ್ನು ಮಾಡು, ನಿತ್ಯ ಜೀವನವನ್ನು ಹಿಡಿದುಕೋ; ಅದಕ್ಕಾಗಿ ದೇವರು ನಿನ್ನನ್ನು ಕರೆದನು, ಮತ್ತು ನೀನು ಅನೇಕ ಸಾಕ್ಷಿಗಳ ಮುಂದೆ ಒಳ್ಳೇ ಪ್ರತಿಜ್ಞೆಯನ್ನು ಮಾಡಿದಿಯಲ್ಲಾ’’** (1 ತಿಮೊಥೆಯನಿಗೆ 6:12)

ನಂಬಿಕೆಯ (ವಿಶ್ವಾಸದ) ನಡೆಯು ಒಂದು ‘ಹೋರಾಟ’ ಎಂದು ಕರೆಯಲ್ಪಡುತ್ತದೆ. ‘ನಂಬಿಕೆಯ ಶ್ರೇಷ್ಠ ಹೋರಾಟವನ್ನು ಮಾಡು’ ಎಂದು ನಮಗೆ ಹೇಳಿಯದೆ. ನಾವು ಒಂದು ಹೋರಾಟ (ಯುದ್ಧ)ದಲ್ಲಿ ಇದ್ದರೆ ನಮಗೆ ವಿರೋಧವಾಗಿ ವೈರಿಗಳಿದ್ದಾರೆ ಎಂದು ಅರ್ಥ. ನಾವು ಒಂದು ಶ್ರೇಷ್ಠ ಹೋರಾಟದಲ್ಲಿದ್ದೇವೆ- ಹೋರಾಡಲು ಯೋಗ್ಯವಾದ ಹೋರಾಟ ಹೀಗಾಗಿ ಹೋರಾಟದ ಮಧ್ಯದಲ್ಲಿ ಬಿಟ್ಟು ಬಿಡಬೇಡಿರಿ - ಯುದ್ಧವು ತೀವ್ರವಾದಾಗಲೂ ನಂಬಿಕೆಯ ಶ್ರೇಷ್ಠ ಹೋರಾಟವನ್ನು ಮಾಡುತ್ತಾ ಮುಂದುವರಿಯಿರಿ.

## ನಮ್ಮ ಹೃದಯಗಳನ್ನು ಕಾಪಾಡಿಕೊಳ್ಳುವುದು

ಕೆಟ್ಟ ಭಾವನೆಗಳಿಂದ ನಮ್ಮ ಹೃದಯುಗಳನ್ನು ಕಾಪಾಡಿಕೊಳ್ಳೋಣ. ಇಂಥ ಕಾಲಗಳಲ್ಲಿಯೇ ನಾವು ದೇವರ ಕಡೆಗೂ ಇತರರ ಕಡೆಗೂ ಕೆಟ್ಟ ಭಾವನೆಗಳನ್ನು

ಬೆಳೆಸಿಕೊಳ್ಳಲು ಪ್ರಾರಂಭಿಸುವುದು. ನಾವು ದೇವರ ಮೇಲೆ, ನಮ್ಮ ಸಭಾಪಾಲಕರ ಮೇಲೆ, ನೆರೆಯವರ ಮೇಲೆ ಹಾಗೂ ನಮ್ಮ ಮೇಲೆ ಕೂಡ ಸಿಟ್ಟಾಗಬಹುದು ನಾವು ಕಹಿಯಾದ ಭಾವನೆಗಳನ್ನು ಬೆಳೆಸಿಕೊಳ್ಳಬಹುದು. ನಾವು ಪರಿಶುದ್ಧ ಗ್ರಂಥಗಳ ಎಚ್ಚರಿಕೆಯನ್ನು ಗಮನಿಸದೆ ಕೆಟ್ಟಭಾವಗಳು ನಮ್ಮನ್ನು ಆಶ್ರಯಿಸಲು ಬಿಟ್ಟರೆ, ಅವು ಪ್ರಭಾವ ಬೀರುವುದು ನಮ್ಮ ಮೇಲೆಯೇ ''ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು'' (ಜ್ಞಾನೋಕ್ತಿಗಳು 4:23). ನಮ್ಮ ಜೀವನವು ನಮ್ಮ ಹೃದಯಗಳಲ್ಲಿರುವವುಗಳಿಂದ ನಿರ್ಧರಿಸಲ್ಪಡುವುದು, ಹೀಗಾಗಿ ನಾವು ನಮ್ಮ ಹೃದಯಗಳನ್ನು ಕಾಪಾಡಿಕೊಳ್ಳಬೇಕು. ಈ ವಿಷಯದಲ್ಲಿ ಯೋಸೇಫನು ನಮಗೆ ಶ್ರೇಷ್ಠ ಉದಾಹರಣೆ, ಯೋಸೇಫನ ಅಣ್ಣಂದಿರು ಅವನನ್ನು ಐಗುಪ್ತ್ಯದ ದಾಸತ್ವಕ್ಕೆ ಮಾರಿದರು. ಬಳಿಕ ಅವರ ತಂದೆ ಸತ್ತ ಮೇಲೆ, ಅವರು ಹಿಂದೆ ಮಾಡಿದ ಕಾರ್ಯಕ್ಕೆ ಯೋಸೇಫನು ಹೇಗೆ ಪ್ರತಿಕ್ರಿಯಿಸುವನೋ ಎಂದು ಅವರಿಗೆ ಭಯವಾಯಿತು. ಯೋಸೇಫನು ದೊಡ್ಡ ಚಿತ್ತವನ್ನು ನೋಡಲು ಸಾಧ್ಯವಾದದ್ದರಿಂದ ಅವನು ಅಣ್ಣಂದಿರನ್ನು ಕ್ಷಮಿಸಿ ಅವರ ಮೇಲೆ ಯಾವ ಕೆಟ್ಟ ಭಾವನೆಯನ್ನೂ ಇಟ್ಟುಕೊಳ್ಳಲಿಲ್ಲ.

**''ಯೋಸೇಫನು ಅವರಿಗೆ, ''ಹೆದರಬೇಡಿರಿ; ನಾನೇನು ದೇವರ ಪ್ರತಿನಿಧಿಯೇ? ನೀವಾದರೂ ನನಗೆ ಕೇಡಾಗಬೇಕೆಂದು ಎಣಿಸಿದ್ದೀರಿ; ಆದರೆ ದೇವರು ಮೇಲಾಗಬೇಕೆಂದು ಸಂಕಲ್ಪಿಸಿದನು. ಈಗ ಅನುಭವಕ್ಕೆ ಬಂದ ಪ್ರಕಾರವೇ ಅನೇಕ ಪ್ರಾಣಿಗಳಿಗೆ ಸಂರಕ್ಷಣೆಯುಂಟಾಗುವಂತೆ ಮಾಡಿದನು''** (ಆದಿಕಾಂಡ 50:19,20).

## ತಾಳ್ಮೆಯನ್ನು ಬೆಳೆಸಿಕೊಳ್ಳುವುದು

**''ನಾನು ಯೆಹೋವನಿಗೋಸ್ಕರ ನಿರೀಕ್ಷಿಸಿಯೇ ನಿರೀಕ್ಷಿಸಿದೆನು, ಆತನು ನನ್ನ ಮೊರೆಗೆ ಕಿವಿಗೊಟ್ಟು ಲಕ್ಷಿಸಿದನು. ನನ್ನನ್ನು ನಾಶನದ ಗುಂಡಿಯೊಳಗಿಂದ ಎತ್ತಿದನು; ಕೆಸರಿನೊಳಗಿಂದ ನನ್ನನ್ನು ತೆಗೆದು ಬಂಡೆಯ ಮೇಲೆ ನಿಲ್ಲಿಸಿ ನಾನು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು. ಆತನು ನನ್ನ ಬಾಯಲ್ಲಿ ನೂತನ ಕೀರ್ತನೆಯನ್ನು ಹುಟ್ಟಿಸಿದ್ದಾನೆ; ಅದು ನಮ್ಮ ದೇವರ ಸ್ತೋತ್ರವೇ. ಆತನ ಮಹತ್ಕಾರ್ಯಗಳನ್ನು ನೋಡಿದ ಅನೇಕರು ಭಯಭಕ್ತಿಯುಳ್ಳವರಾಗಿ ಯೆಹೋವನಲ್ಲಿ ನಂಬಿಕೆಯಿಡುವರು''** (ಕೀರ್ತನೆಗಳು 40:1-3).

ನೀವು ಜೀವನದ ಹೋರಾಟಗಳನ್ನು ದಾಟಿಹೋಗುವಾಗ ತಾಳ್ಮೆಯನ್ನು ಬೆಳೆಸಿಕೊಳ್ಳಿರಿ. ನಾನು ಒಂದು ಕಷ್ಟಕಾಲವನ್ನು ದಾಟುತ್ತಿದ್ದಾಗ ಕೀರ್ತನೆಗಳು 40:1-3 ನನಗೆ ಬೇಕಾದ ಬಲ ಮತ್ತು ಪ್ರೋತ್ಸಾಹವನ್ನು ನೀಡಿತು. ನಾನು 'ಗುಂಡಿ'ಯಿಂದ

ಹೊರಬರುವೆನೆಂದು ನನಗೆ ತಿಳಿದಿತ್ತು. ಯಾವಾಗ ಎಂದು ತಿಳಿಯದಿದ್ದರೂ ದೇವರು ನನ್ನನ್ನು ಮೇಲಕ್ಕೆತ್ತುವನೆಂದು ನನಗೆ ತಿಳಿದಿತ್ತು. ಆಗ ಏನೂ ಇಲ್ಲದಿದ್ದರೂ ನನ್ನ ಕತ್ತಲಿನ ಸಮಯಗಳನ್ನು ದಾಟುತ್ತಿದ್ದಾಗ ನಾನು ಏನು ಮಾಡಬೇಕೆಂದು ದೇವರು ಅಪೇಕ್ಷಿಸುತ್ತಾನೆ ಮತ್ತು ನಾನು ಏನಾಗಬೇಕೆಂದು ಆತನ ಅಪೇಕ್ಷೆ ಎಂದು ಮನಸ್ಸಿನಲ್ಲಿ ದೃಷ್ಟಿಸಿ ನೋಡುತ್ತಿದ್ದ ಕಾಲಗಳಿದ್ದವು. ಕಷ್ಟದ ಪರಿಸ್ಥಿತಿಗಳನ್ನು ಸಹಿಸಿದೆನು ಯಾಕೆಂದರೆ ನನ್ನ ಮುಂದೆ ಸಂತೋಷವು ಇಡಲ್ಪಟ್ಟಿದೆ ಎಂದು ತಿಳಿದಿದ್ದೆನು.

**''ಬಾಧೆಯನ್ನು ತಾಳ್ಮೆಯಿಂದ ಸಹಿಸಿಕೊಳ್ಳುವ ವಿಷಯದಲ್ಲಿ ಕರ್ತನ ಹೆಸರಿನಲ್ಲಿ ಮಾತಾಡಿದ ಪ್ರವಾದಿಗಳನ್ನೇ ಮಾದರಿ ಮಾಡಿಕೊಳ್ಳಿರಿ. ತಾಳಿಕೊಂಡಿರುವುದನ್ನು ಧನ್ಯರೆಂದು ಹೇಳುತ್ತೇವಲ್ಲವೇ ನೀವು ಯೋಬನಲ್ಲಿದ್ದ ತಾಳ್ಮೆಯ ವಿಷಯವಾಗಿ ಕೇಳಿ ಕರ್ತನು ಅವನಿಗೆ ಅಂತ್ಯದಲ್ಲಿ ಮಾಡಿದ್ದನ್ನು ನೋಡಿ ಕರ್ತನು ಕರುಣಾಸಾಗರನೂ ದಯಾಳುವೂ ಆಗಿದ್ದಾನೆಂದು ತಿಳಿದಿದ್ದೀರಷ್ಟೆ''** (ಯಾಕೋಬನ 5:10,11)

**''ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ.''** (ಇಬ್ರಿಯರಿಗೆ 12:2)

ಯಾಕೋಬನು ಹೇಳಿದಂತೆ ಪ್ರವಾದಿಗಳ ತಾಳ್ಮೆಯನ್ನು ನೋಡಿರಿ ಅವನ ಎಲ್ಲಾ ಸಂಕಟಗಳಲ್ಲಿ ತಾಳ್ಮೆಯಿಂದಿದ್ದ ಯೋಬನನ್ನು ಗಮನಿಸಿರಿ. ನೀವು ತಾಳ್ಮೆಯಲ್ಲಿ ದೃಢವಾಗಿರಬೇಕು. ಯೇಸು ತನ್ನ ಮುಂದೆ ಇಟ್ಟಿದ್ದ ಸಂತೋಷವನ್ನು ನೋಡಿ ಶಿಲುಬೆಯನ್ನು ಸಹಿಸಿಕೊಂಡನು. ದೇವರು ನಿಮಗೆ ಕೊಟ್ಟ ದರ್ಶನವನ್ನು ಇಟ್ಟುಕೊಳ್ಳಿರಿ. ಅಸಾಧ್ಯವೆಂದು ಕಾಣುವಾಗಲೂ ದೇವರು ನಿಮಗೆ ಕೊಟ್ಟ ದರ್ಶನವನ್ನು ನೂತನ ಪಡಿಸಿ ನವೀಕರಿಸಿರಿ. ರಾತ್ರಿಯ ಸಮಯಗಳನ್ನು ದಾಟುವಾಗ ದಾರಿಯುದ್ದಕ್ಕೂ ಆ ದರ್ಶನವು ನೇರವೇರಿದ್ದನ್ನು ನೋಡುವ ಯೋಚನೆಯು ನೀವು ಮುನ್ನಡೆಯುವಂತೆ ಸಹಾಯಮಾಡಲಿ.

## ನಮಗೆ ಯಾವಾಗಲೂ ಎಲ್ಲಾ ಉತ್ತರಗಳೂ ಸಿಗಲಾರವು

**''ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು; ಆದರೆ ಆತನಿಂದ ಪ್ರಕಟವಾದವುಗಳು ಸದಾ ನಮ್ಮ ಮತ್ತು ನಮ್ಮ ಸಂತತಿಯವರ ಪಾಲಾಗಿರುವುದರಿಂದ ನಾವು ಆ ಧರ್ಮಶಾಸ್ತ್ರ ನಿಯಮಗಳನ್ನು ಅನುಸರಿಸಿ ನಡೆಯಬೇಕಾದ ಹಂಗಿನಲ್ಲಿದ್ದೇವೆ''** (ಧರ್ಮೋಪದೇಶಕಾಂಡ 29:29)

ಪರಲೋಕದ ಈ ಕಡೆಯಲ್ಲಿ ನಮ್ಮ ಕೆಲವು ಪ್ರಶ್ನೆಗಳಿಗೆ ಎಂದೂ ಉತ್ತರ ಸಿಗದಿದ್ದರೂ ನಮ್ಮಲ್ಲನೇಕರು ಆ ಪ್ರಶ್ನೆಗಳಿಗೆ ಬಹಳ ಒತ್ತುಕೊಡುವ ಒಲವು ಹೊಂದಿದ್ದೇವೆ. ದೇವರು ನಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದ ಹಂಗಿನಲ್ಲಿಲ್ಲ. ನಾವು ತಿಳಿಯಬೇಕಾದದ್ದೆಲ್ಲವನ್ನೂ ಆತನು ನಮಗೆ ಪರಿಶುದ್ಧ ಗ್ರಂಥಗಳಲ್ಲಿ ತಿಳಿಸಿದ್ದಾನೆ. ಜೀವನದ ರಾತ್ರಿಯ ಸಮಯಗಳಲ್ಲಿ ನಾವು ಕೇಳುವ ಅನೇಕ ಪ್ರಶ್ನೆಗಳಿರಬಹುದು - ಅವುಗಳಲ್ಲಿ ಅನೇಕವುಗಳಿಗೆ ಉತ್ತರ ಸಿಗದೆ ಹಾಗೇ ಉಳಿಯಬಹುದು. ಹಾಗಿದ್ದಾಗ್ಯೂ, ಉತ್ತರ ಸಿಗದ ಪ್ರಶ್ನೆಯು ನಿಮ್ಮ ಜೀವನವನ್ನು ತಟಸ್ಥಗೊಳಿಸಲು ಬಿಡಬೇಡಿರಿ. ಜೀವನವನ್ನು ಮುಂದುವರಿಸಿರಿ. ನೀವು ಪರಲೋಕಕ್ಕೆ ಹೋದಾಗ ಅದಕ್ಕೆ ಉತ್ತರ ಸಿಗುವುದು. ಈಗ, ಗುರಿಯತ್ತ ನಿಮ್ಮ ಓಟವನ್ನು ಓಡಿರಿ. ನಾವು ''ಏಕೆ?'' ಎಂದು ಕೇಳುವುದನ್ನು ನಿಲ್ಲಿಸಿ, ದೇವರ ಯೋಜನೆಯಲ್ಲಿ ಮುಂದುವರಿಯುವ ಕಾಲಗಳಿವೆ!

## ದೇವರ ಕರೆಗೆ ನಂಬಿಗಸ್ತರಾಗಿರುವುದು. ಕೆಲಸ ಮಾಡುತ್ತಾ ಇರುವುದು.

**''ಆದುದರಿಂದ, ನನ್ನ ಪ್ರಿಯ ಸಹೋದರರೇ, ಸ್ಥಿರಚಿತ್ತರಾಗಿಯೂ ನಿಶ್ಚಲರಾಗಿಯೂ ಇರಿ. ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವುದಿಲ್ಲವೆಂದು ತಿಳಿದು ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವವರಾಗಿರಿ''** (1 ಕೊರಿಂಥದವರಿಗೆ 15:58)

**''ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು''** (2 ತಿಮೊಥೆ ಯನಿಗೆ 4:12)

ನಾವು ಜೀವನದಲ್ಲಿ ಒಂದು ರಾತ್ರಿಯ ಸಮಯವನ್ನು ಅಥವಾ ಕಷ್ಟದ ಕಾಲವನ್ನು ದಾಟುತ್ತಿದ್ದೇವೆ ಎಂಬುದಕ್ಕಾಗಿ ಮಾತ್ರ ನಮಗಾದ ದೇವರ ಶಕ್ತಿಯಿಂದ ಸಂಪೂರ್ಣವಾಗಿ ಹಿಂದಕ್ಕೆ ಸರಿಯಬೇಕೆಂದಿಲ್ಲ. ನಮ್ಮಲ್ಲಿ ಕೆಲವರು ಸುಲಭವೆನಿಸಿದಾಗ ಮಾತ್ರ ದೇವರ ಸೇವೆ ಮಾಡುವ ರೂಢಿ ಮಾಡಿದ್ದೇವೆ. ಜೀವನವು ಸ್ವಲ್ಪ ಕಷ್ಟಕರವೆನಿಸಿದಾಗ ನಾವು ಸೇವೆಯಿಂದ ಸಂಪೂರ್ಣವಾಗಿ ಹಿಂದೆಗೆದು ಸ್ವ ಎಂಬ ಗೂಡಿನೊಳಗೆ ಸೇರಿಕೊಳ್ಳುತ್ತೇವೆ. ನಾವು ಇತರರ ಕುರಿತು ಚಿಂತಿಸುವುದಿಲ್ಲ. ಒಂದು 'ಸ್ವರ್ಗೀಯ' ಕರೆಗೆ ಹೃದಯದ ಪ್ರತಿಕ್ರಿಯೆಯಿರುವ ಬದಲಾಗಿ ಪರಿಸ್ಥಿತಿಗಳ ಮೇಲೆ ನಮ್ಮ ಜೀವನಗಳು ಆಧರಿಸಿದಂತೆ ತೋರುತ್ತದೆ. ನಮ್ಮ ಬದ್ಧತೆಯು ದೇವರ ಕರೆಗೆ ಇರತಕ್ಕದ್ದು. ನೀವು ಇರುವ ಜೀವನದ ಸಮಯವು ಯಾವುದೇ ಇರಲಿ ದೇವರ ಕರೆಗೆ ಬದ್ಧರಾಗಿರಿ. ನೀವಿರುವ ಜೀವನದ ಸ್ಥಿತಿಯು ಏನೇ ಇರಲಿ ದೇವರು ಏನು ಮಾಡಬೇಕೆಂದು ಹೇಳುತ್ತಾನೋ ಅದನ್ನು

ಮಾಡಿರಿ. ಬೆಚ್ಚಗೂ ತಣ್ಣಗೂ ಆಗುವ ಕ್ರೈಸ್ತರಾಗಿರಬೇಡಿರಿ. ದೇವರಾತ್ಮನ ಫಲವು ಶಮೆದಮೆ ಅಥವಾ ಸಂಯಮ. ಪರಿಸ್ಥಿತಿ ಅಥವಾ ಸನ್ನಿವೇಶವು ಏನೇ ಇರಲಿ ನಿಷ್ಠೆಯಿಂದಿರುವ ಸಾಮರ್ಥ್ಯವಾಗಿದೆ.

## ಪಾಠಗಳನ್ನು ಕಲಿಯುವುದು. ಅಗತ್ಯವುಳ್ಳ ಬದಲಾವಣೆಗಳನ್ನು ಮಾಡುವುದು. ಜ್ಞಾನಿಗಳಾಗಿರುವುದು

ನಮ್ಮ ಜೀವನದಲ್ಲಿ - ನಮ್ಮ ಗುಣಸ್ವಭಾವ, ನಡತೆ ಮತ್ತು ನಮ್ಮ ಜೀವನ ರೀತಿಗಳಲ್ಲಿ ನಾವು ಕಲಿಯಬೇಕಾದ ನಿರ್ದಿಷ್ಟ ಪಾಠಗಳು, ಮಾಡಿಕೊಳ್ಳಬೇಕಾದ ನಿರ್ದಿಷ್ಟ ಮಾರ್ಪಾಡುಗಳು ಇವೆ. ನಾವು ಇವುಗಳನ್ನು ಕಲಿತು ಮಾರ್ಪಾಡುಗಳನ್ನು ಮಾಡಿಕೊಳ್ಳುವವರೆಗೆ - ಪ್ರೌಢಾವಸ್ಥೆಯನ್ನು ತಲುಪಿ ಮಾಗಿದ ಸ್ಥಿತಿಗೆ ಬರುವವರೆಗೆ - ನಮ್ಮ ಸಮಯವು ಬರಲಾಗದು.

**ನಾವು ಮಧ್ಯರಾತ್ರಿಯಲ್ಲಿ ಮಾಡತಕ್ಕದ್ದೇನು?**

- ನಮ್ಮ ಹೃದಯಗಳು ಕರ್ತನಿಗೆ ಭಕ್ತಿಯಿಂದಿರುವುದು
- ನಮ್ಮ ತುಟಿಗಳಿಂದ ಆತನನ್ನು ಸ್ತುತಿಸುವುದು
- ಕಲಿತದ್ದರಂತೆ ಜೀವಿಸುವುದು
    - ನಮ್ಮ ವಿಶ್ವಾಸಕ್ಕೂ ನಾವು ಮಾಡಿದ ಪ್ರತಿಜ್ಞೆಗೂ ಬದ್ಧರಾಗಿರುವುದು
    - ನಂಬಿಕೆಯ ಶ್ರೇಷ್ಠ ಹೋರಾಟವನ್ನು ಮಾಡುವುದು
    - ನಮ್ಮ ಹೃದಯಗಳನ್ನು ಕಾಪಾಡಿಕೊಳ್ಳುವುದು
    - ತಾಳ್ಮೆಯನ್ನು ಬೆಳೆಸಿಕೊಳ್ಳುವುದು
- ನಮಗೆ ಯಾವಾಗಲೂ ಎಲ್ಲಾ ಉತ್ತರಗಳೂ ಸಿಗಲಾರವು
- ದೇವರ ಕರೆಗೆ ನಂಬಿಗಸ್ತರಾಗಿರುವುದು. ಕೆಲಸ ಮಾಡುತ್ತಾ ಇರುವುದು
- ಪಾಠಗಳನ್ನು ಕಲಿಯುವುದು. ಅಗತ್ಯ ಬದಲಾವಣೆಗಳನ್ನು ಮಾಡುವುದು. ಜ್ಞಾನಿಗಳಾಗಿರುವುದು.

# 7

# ನನ್ನ ಬೆಳಿಗ್ಗೆ ಯಾವಾಗ ಉದಯವಾಗುವುದು?

ನಮ್ಮಲ್ಲನೇಕರಿಗೆ ನಾವು ರಾತ್ರಿಯ ಮಧ್ಯದಲ್ಲಿದ್ದೇವೆ ಎಂದು ತಿಳಿಯುವುದು ಏನೂ ಕಷ್ಟವಿಲ್ಲ ಆದರೆ ಅನೇಕ ವೇಳೆ ನಮ್ಮ ಬೆಳಿಗ್ಗೆ ಯಾವಾಗ ಆಗುವುದು ಎಂದು ಕೇಳುತ್ತೇವೆ. ಉದಯುವನ್ನು ತ್ವರೆಗೊಳಿಸಲು ಏನು ಮಾಡುವುದೆಂಬ ಕಾತರತೆಯಲ್ಲಿದ್ದೇವೆ. ನಾವು ಕಾಲವನ್ನು ನೋಡುವಂತೆ ದೇವರು ನೋಡುವುದಿಲ್ಲ ಎಂದು ನಾವು ತಿಳುಕೊಳ್ಳಬೇಕು. ಸಾಮಾನ್ಯವಾಗಿ ನಾವು ದೇವರು ಮಧ್ಯ ಪ್ರವೇಶಿಸಿ ನಮ್ಮ ಶೋಕವನ್ನು ಕೂಡಲೇ ಹರ್ಷಕ್ಕೆ ಮಾರ್ಪಡಿಸಬೇಕೆಂದು ಅಪೇಕ್ಷಿಸುತ್ತೇವೆ. ಹಾಗಿದ್ದಾಗ್ಯೂ, ದೇವರು ಕಾಲವನ್ನು ತಿಳಿದುಕೊಳ್ಳುವ ರೀತಿಯು ನಾವು ತಿಳಿದುಕೊಂಡಿರುವ ರೀತಿಗಿಂತ ತೀರ ಭಿನ್ನವಾಗಿದೆ.

**''ಪ್ರಿಯರೇ ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ ಎಂಬುದನ್ನು ಮಾತ್ರ ಮರೆಯಬೇಡಿರಿ''** (2 ಪೇತ್ರನು 3:8)

**''ಸಾವಿರ ವರುಷಗಳು ನಿನ್ನ ದೃಷ್ಟಿಯಲ್ಲಿ ಗತಿಸಿ ಹೋದ ನಿನ್ನಿನ ದಿನದಂತೆಯೂ ರಾತ್ರಿಯ ಜಾವದಂತೆಯೂ ಅವೆ''** (ಕೀರ್ತನೆಗಳು 90:4)

## ನಾವು ಅಗತ್ಯವುಳ್ಳ ಮಾರ್ಪಾಟುಗಳನ್ನು ಮಾಡುವವರೆಗೆ ದೇವರು ಕಾಯುವನು

**''ನೋಡಿರಿ, ಕೇಡಿನ ಬಂಧಗಳನ್ನು ಬಿಚ್ಚುವುದು, ನೊಗದ ಕಣ್ಣಿಗಳನ್ನು ಕಳಚುವುದು, ಜಜ್ಜಿ ಹೋದವರನ್ನು ಬಿಡುಗಡೆ ಮಾಡುವದು, ನೊಗಗಳನ್ನೆಲ್ಲಾ ಮುರಿಯುವುದು, ಹಸಿದವರಿಗೆ ಅನ್ನವನ್ನು ಹಂಚುವುದು, ಅಲೆಯುತ್ತಿರುವ ಬಡವರನ್ನು ಮನೆಗೆ ಬರಮಾಡಿಕೊಳ್ಳುವುದು, ಬೆತ್ತಲೆಯವರನ್ನು ಕಂಡಾಗೆಲ್ಲಾ ಅವರಿಗೆ ಹೊದಿಸುವುದು, ನಿನ್ನಂತೆ ನರನಾಗಿರುವ ಯಾರಿಗೇ ಆಗಲಿ ಮುಖ ತಪ್ಪಿಸಿಕೊಳ್ಳದಿರುವುದು ಇವುಗಳೇ ನನಗೆ ಇಷ್ಟವಾದ ಉಪವಾಸವ್ರತವಲ್ಲವೇ, ಇದನ್ನು ಆಚರಿಸುವಾಗ ನಿಮಗೆ ಬೆಳಕು ಉದಯದಂತೆ ಭೇದಿಸಿಕೊಂಡು ಬರುವುದು, ನಿಮ್ಮ ಕ್ಷೇಮವು ಬೇಗನೆ ವಿಕಸಿಸುವುದು; ನಿಮ್ಮ ಧರ್ಮವು ನಿಮಗೆ ಮುಂಬಲವಾಗಿ ಮುಂದುವರಿಯುವುದು, ಯೆಹೋವನ ಮಹಿಮೆಯು ನಿಮಗೆ ಹಿಂಬಲವಾಗಿರುವುದು. ಆಗ ನೀವು ಕೂಗಿದರೆ ಯೆಹೋವನು ಉತ್ತರಕೊಡುವನು, ಮೊರೆಯಿಟ್ಟು ಕರೆದರೆ ಇಗೋ, ಇದ್ದೇನೆ, ಅನ್ನುವನು. ನೀವು ನಿಮ್ಮ ಮಧ್ಯದೊಳಗಿಂದ ನೊಗವನ್ನೂ ಬೆರಳ ಸನ್ನೆಯನ್ನೂ ಕೆಡುಕಿನ ನುಡಿಯನ್ನೂ ಹೋಗಲಾಡಿಸಿ ನಿಮಗೆ ಪ್ರಿಯವಾದದ್ದನ್ನು ಹಸಿದವರಿಗೆ ಒದಗಿಸಿ ಕುಗ್ಗಿದವರ ಆಶೆಯನ್ನು ನೆರವೇರಿಸಿದರೆ ಆಗ ನಿಮಗೆ ಕತ್ತಲಲ್ಲಿ ಬೆಳಕು ಉದಯಿಸುವುದು, ನಿಮ್ಮ ಅಂಧಕಾರವು**

**ಪರಿಹಾರವಾಗಿ ಮಧ್ಯಾಹ್ನವಾಗುವುದು ಮತ್ತು ಯೆಹೋವನು ನಿಮ್ಮನ್ನು ನಿತ್ಯವೂ ನಡಿಸುತ್ತಾ ಮರುಭೂಮಿಯಲ್ಲಿಯೂ ನಿಮ್ಮ ಆತ್ಮವನ್ನು ತೃಪ್ತಿಗೊಳಿಸಿ ನಿಮ್ಮ ಎಲುಬುಗಳನ್ನು ಸಸಾರಮಾಡುವನು; ನೀವು ತಂಪಾದ ತೋಟಕ್ಕೂ ನೀರಿಗೆ ಮೋಸವಿಲ್ಲದ ಬುಗ್ಗೆಗೂ ಸಮಾನರಾಗುವಿರಿ''** (ಯೆಶಾಯ 58:6-11)

ನಮ್ಮ ಜೀವನಗಳಲ್ಲಿ ಅಗತ್ಯವಾಗಿರುವ ಬದಲಾವಣೆಗಳನ್ನು ಮಾಡಲು ನಾವು ನಿರಾಕರಿಸಿ, ಬಲ್ಲೆವು ಎಂದು ಹಠವಾದಿಗಳಾದಾಗ ರಾತ್ರಿಯ ಸಮಯವು ದೀರ್ಘವಾಗುವವು ಹಾಗೂ ಬೆಳಿಗ್ಗೆಯ ಉದಯವಾಗಲು ತಡವಾಗುವುದು.

ಮೇಲೆ ಹೇಳಿದ ಪರಿಶುದ್ಧ ಗ್ರಂಥ ಭಾಗದಲ್ಲಿರುವ ''ಆಗ'' ಎಂಬ ಪದವು ಬಹಳ ಮಹತ್ವಪೂರ್ಣವಾಗಿದೆ. ''ಆಗ ನಿಮಗೆ ಕತ್ತಲಲ್ಲಿ ಬೆಳಕು ಉದಯಿಸುವುದು'' ಯಾವಾಗ? ದೇವರು ಒಬ್ಬನಿಂದ ಅಪೇಕ್ಷಿಸಿದ್ದನ್ನು ಅವನು ಮಾಡಿದಾಗ, ಕೆಟ್ಟದ್ದನ್ನು ಬಿಟ್ಟುಬಿಡುವುದು, ಬಾಧಿಸುವುದನ್ನು ಬಿಡುವುದು, ಹಸಿದವನಿಗೆ ಅನ್ನವನ್ನು ಕೊಡುವುದು, ಅಗತ್ಯವಿದ್ದವನಿಗೆ ಸಹಾಯ ಮಾಡುವುದು, ಅಗತ್ಯವಿದ್ದವನಿಗೆ ಮುಖ ತಪ್ಪಿಸಿಕೊಳ್ಳದಿರುವುದು.

ನಾವು ಪರಿಶುದ್ಧ ಗ್ರಂಥದಲ್ಲಿ ನೋಡುವಂತೆ, 'ಕೈರೋಸ್' ಅಥವಾ ಕಾಲದ ಪರಿಪೂರ್ಣತೆಯು ಒಬ್ಬ ವ್ಯಕ್ತಿಯ ಜೀವನದಲ್ಲಿ ಮತ್ತು ಅವನ ಜೀವನವನ್ನು ಆವರಿಸಿರುವ ಸನ್ನಿವೇಶಗಳಲ್ಲಿ ದೇವರು ಅಪೇಕ್ಷಿಸುವ ವಿಷಯಗಳು ಒಟ್ಟಿಗೆ ಸೇರಿ ಬರುವ ಒಂದು ಕಾಲವಾಗಿದೆ. ನಮ್ಮನ್ನು ಸುತ್ತುವರಿದಿರುವ ವಿಷಯಗಳನ್ನು ದೇವರು ಸುಲಭವಾಗಿ ಸಾಲುಗೂಡಿಸಬಹುದು (ನಮ್ಮ ಸುತ್ತಲಿರುವ ಜನರು, ಸ್ಥಳಗಳು ಮತ್ತು ವಿಷಯಗಳು). ನಮ್ಮಲ್ಲಿರುವ ವಿಷಯಗಳು (ನಮ್ಮ ಹೃದಯದ ಮನೋಭಾವನೆಗಳು, ನಮ್ಮ ಗುಣಸ್ವಭಾವಗಳು, ಜನರೊಂದಿಗಿನ ನಮ್ಮ ಸಂಬಂಧಗಳು, ಇನ್ನಿತ್ಯಾದಿ) ಆತನು ಅಪೇಕ್ಷಿಸುವಂತೆ ಸಾಲುಗೂಡುವಂತೆ ಕೂಡ ಆತನು ಕಾಯುತ್ತಾನೆ. ನಾವು ಆತನ ಚಿತ್ತ, ಯೋಚನೆ ಮತ್ತು ಉದ್ದೇಶಗಳಿಗೆ ಎಷ್ಟು ಬೇಗನೆ ಮಾರ್ಪಟ್ಟು ಸಾಲುಗೂಡುತ್ತೇವೋ ಅಷ್ಟು ಬೇಗನೆ ನಮ್ಮ ಜೀವನದ ಮುಂದಿನ ಸಮಯಕ್ಕೆ ದಾಟಿಹೋಗಬಹುದು.

**ನೀವು ಪ್ರವೇಶಿಸಿ ಮಾರ್ಗವು ನೀವು ಹೊರಬರುವ ಮಾರ್ಗವನ್ನು ನಿರ್ಧರಿಸುವುದು.**

- ದೇವರು ನಿಮ್ಮನ್ನು ಒಳಗೆ ತಂದರೆ, ದೇವರು ನಿಮ್ಮನ್ನು ಹೊರಗೆ ತರುವನು

- ನೀವು ನಿಮ್ಮ ಸ್ವಂತ ಬುದ್ಧಿಹೀನತೆಯಿಂದ ಒಳಗೆ ಹೆಜ್ಜೆ ಇಟ್ಟಿದರೆ, ನೀವು ಅದರಿಂದ ಹೊರಗೆ ಬರುವ ಮೊದಲು ಕೆಲವು ಮಾರ್ಪಾಡುಗಳನ್ನು ಮಾಡಿ ಕೆಲವು ಪಾಠಗಳನ್ನು ಕಲಿಯಬೇಕಾಗಿದೆ.

- ಜನರು ನಿಮ್ಮನ್ನು ಒಳಗೆ ತಳ್ಳಿದ್ದರೆ, ನಿಮ್ಮನ್ನು ಹೊರಗೆ ಎಳೆಯಲು ದೇವರು ಜನರನ್ನು ಉಪಯೋಗಿಸುವನು! ಪೋಟಿಫರನ ಹೆಂಡತಿಯಿಂದ ಸೆರೆಮನೆಗೆ ಹಾಕಲ್ಪಟ್ಟ ಯೋಸೇಫನ ವಿಷಯವನ್ನು ಗಮನಿಸಿರಿ. ಅವನನ್ನು ಹೊರಕ್ಕೆ ತರಲು ದೇವರು ಒಬ್ಬ ಪಾನದಾಯಕನನ್ನು ಉಪಯೋಗಿಸಿದನು.

- ವೈರಿಯು ತೀಕ್ಷ್ಣತೆಯಿಂದ ನಿಮಗೆ ವಿರೋಧವಾಗಿ ಬಂದಿದ್ದರೆ ಮತ್ತು ನೀವು ದೃಢವಾಗಿ ನಿಂತಿದ್ದರೆ, ಆಗ ಅದೇ ವೈರಿಯು ನಿಮ್ಮಿಂದ ಓಡಿ ಹೋಗುವನು

ನಮ್ಮ ರಾತ್ರಿಯ ಸಮಯಗಳಲ್ಲಿ ನಮಗೆ ನಿರೀಕ್ಷೆಯನ್ನು ಕೊಡುವ ಪರಿಶುದ್ಧಗ್ರಂಥಗಳ ಈ ಅದ್ಭುತಕರ ಭಾಗಗಳೊಂದಿಗೆ ಮುಗಿಸಲು ಅಪೇಕ್ಷಿಸುತ್ತೇನೆ. ನನ್ನ ರಾತ್ರಿಯ ಸಮಯಗಳನ್ನು ನಾನು ದಾಟಿ ಹೋಗುವಾಗ ಈ ವಚನಗಳು ನನಗೆ ದೊಡ್ಡ ಆದರಣೆಯಾಗಿದ್ದವು.

**''ಚೊಚ್ಚಲು ಮಗನು ಹುಟ್ಟಿದಾಗ ಯೋಸೇಫನು - ನಾನು ನನ್ನ ಎಲ್ಲಾ ಕಷ್ಟವನ್ನು ತಂದೆಯ ಮನೆಯವರನ್ನೂ ಮರೆತು ಬಿಡುವಂತೆ ದೇವರು ಮಾಡಿದ್ದಾನಲ್ಲಾ ಎಂದು ಹೇಳಿ ಅವನಿಗೆ ಮನಸ್ಸೆ ಎಂದು ಹೆಸರಿಟ್ಟನು. ಎರಡನೆಯ ಮಗನು ಹುಟ್ಟಿದಾಗ ಅವನು - ನನಗೆ ಸಂಕಟ ಬಂದ ದೇಶದಲ್ಲೇ ದೇವರು ಅಭಿವೃದ್ಧಿಯನ್ನು ದಯಪಾಲಿಸಿದ್ದಾನೆಂದು ಹೇಳಿ ಆ ಮಗನಿಗೆ ಎಫ್ರಾಯೀಮ್ ಎಂದು ಹೆಸರಿಟ್ಟನು''**
(ಆದಿಕಾಂಡ 41:51,52)

ಯೋಸೇಫನು ಪ್ರಧಾನ ಮಂತ್ರಿಯಾದ ಮೇಲೆ ಅವನಿಗೆ ಇಬ್ಬರು ಮಕ್ಕಳು ಹುಟ್ಟಿದರು. ಮೊದಲನೆಯವನಿಗೆ ಮನಸ್ಸೆ ಮತ್ತು ಎರಡನೆಯವನಿಗೆ ಎಫ್ರಾಯೀಮ್ ಎಂದು ಹೆಸರಿಟ್ಟನು. ಯೋಸೇಫನು ಅವನ ಜೀವನದಲ್ಲಿ ಸಹಿಸಿಕೊಂಡದ್ದರ ಬೆಳಕಿನಲ್ಲಿ ಇಬ್ಬರ ಹೆಸರುಗಳ ಅರ್ಥಗಳೂ ಮಹತ್ವಪೂರ್ಣವಾಗಿವೆ. ನೀವು ಸಂಕಟ

ಅನುಭವಿಸಿರಬಹುದಾದ ಪ್ರದೇಶದಲ್ಲಿ ದೇವರು ನಿಮ್ಮನ್ನು ಫಲಭರಿತರಾಗುವಂತೆ ಮಾಡಬಹುದು (ಆದಿಕಾಂಡ 41:51,52) ಆಮೆನ್! ಇದು ದೇವರು ಕೆಲಸ ಮಾಡುವ, ಕಾರ್ಯ ನಡೆಸುವ ರೀತಿ. ನೀವು ಕಠಿಣ ಕಾಲವನ್ನು ದಾಟುತ್ತಿದ್ದು ನೀವು ದಾಟಿಹೋಗುತ್ತಿರುವವುಗಳ ಪರಿಣಾಮವಾಗಿ ನಿಮ್ಮ ಭಾವನೆಗಳಲ್ಲಿ ಕಲೆಗಳಿರಬಹುದು. ಸತ್ಯವೇದದ ದೇವರು ನಿಮ್ಮ ಹೋರಾಟಗಳ ಜ್ಞಾಪಕಗಳನ್ನು ಕೂಡ ಅಳಿಸಿ ಬಿಡುವನೆಂಬದಾಗಿ ವಾಗ್ದಾನ ಮಾಡುತ್ತಾನೆಂಬದರಲ್ಲಿ ಧೈರ್ಯವಾಗಿರಿ. ಇದು ಬೆರಗುಗೊಳಿಸುವುದಿಲ್ಲವೋ! ನಾವು ಅದ್ಭುತಕರವಾದ ಒಬ್ಬ ದೇವರ ಸೇವೆ ಮಾಡುತ್ತೇವೆ. ಇಂದು ನಾನು ಹಿಂದಕ್ಕೆ ತಿರುಗಿ ನಾನು ಅನುಭವಿಸಿದ ಕಷ್ಟಕಾಲಗಳನ್ನು ನೋಡಿದಾಗ, ನಾನು ಕಲಿಯಲು ಸಾಧ್ಯವಾದ ಪಾಠಗಳಿಗಾಗಿ ಮತ್ತು ಆತನು ನನ್ನೊಂದಿಗೆ ಹಂಚಿಕೊಂಡ ಕೆಲವು ಅಮೂಲ್ಯ ಸತ್ಯಗಳಿಗಾಗಿ ಆತನನ್ನು ಸ್ತುತಿಸಲು ಶಕ್ತನಾಗಿದ್ದೇನೆ. ನಾನು ಬರೆಯಲು ಸಾಧ್ಯವಾದ 'ಶುದ್ದೀಕರಿಸುವ ಬೆಂಕಿ' (ದ ರಿಫೈನರ್ಸ್ ಫಯರ್) ಮತ್ತು 'ಎಲ್ಲಾ ಉದ್ದೇಶಗಳಿಗಾಗಿರುವ ಒಂದು ಕಾಲ' (ಎ ಟೈಮ್ ಫಾರ್ ಎವ್ರಿ ಪರ್ಪಸ್)ಗಳಂಥ ಕೆಲವು ಪುಸ್ತಕಗಳು ನನ್ನ ಜೀವನದಲ್ಲಿ ಕಷ್ಟದ ಸಮಯಗಳನ್ನು ನಾನು ದಾಟಿ ಹೋಗುತ್ತಿದ್ದಾಗ ಕುರಿತ ಪಾಠಗಳ ಪರಿಣಾಮದಿಂದಾಗಿದೆ.

**''ಆತನ ಕೋಪವು ಕ್ಷಣ ಮಾತ್ರವೇ; ಆತನ ಅನುಗ್ರಹವೋ ಜೀವಮಾನವೆಲ್ಲಾ ಇರುವುದು; ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸಬಹುದು''** (ಕೀರ್ತನೆಗಳು 30:5)

**''ಆಗ ನೀನು ನನ್ನ ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದಿ; ನಾನು ಕಟ್ಟಿಕೊಂಡಿದ್ದ ಗೋಣಿತಟ್ಟನ್ನು ತೆಗೆದುಬಿಟ್ಟು ಹರ್ಷವಸ್ತ್ರವನ್ನು ನನಗೆ ಧಾರಣೆ ಮಾಡಿಸಿದಿ. ಇದರಿಂದ ಯೆಹೋವನೇ, ನನ್ನ ಮನಸ್ಸು ಎಡೆಬಿಡದೆ ನಿನ್ನನ್ನು ಕೀರ್ತಿಸುತ್ತಿರುವುದು; ನನ್ನ ದೇವರೇ, ನಿನ್ನನ್ನು ಸದಾಕಾಲವೂ ಸ್ತುತಿಸುವೆನು''** (ಕೀರ್ತನೆಗಳು 30:11,12)

**''ನೀನು ಎದ್ದು ಚೀಯೋನನ್ನು ಕರುಣಿಸುವಿ; ಅದಕ್ಕೆ ಕೃಪೆ ತೋರಿಸುವ ಸಮಯ ಇದೇ, ನಿಯಮಿತ ಕಾಲವು ಬಂದದೆ''** (ಕೀರ್ತನೆಗಳು 102:13)

ಬೆಳಿಗ್ಗೆಯು ನಿಶ್ಚಯವಾಗಿ ಬರುವುದು! ಸಂಜೆಗೆ ದುಃಖವು ನಮ್ಮ ಬಳಿಯಲ್ಲಿ ತಂಗುವುದು ಆದರೆ ಉದಯವು ಬರುವುದೆಂಬ ಭರವಸೆದಿಂದಿರೋಣ (ಕೀರ್ತನೆಗಳು 30:5). ನಮ್ಮ ಗೋಳಾಟವನ್ನು ತಪ್ಪಿಸಿ ನಾವು ಕುಣಿದಾಡುವಂತೆ ಮಾಡಲು ಆತನು ಶಕ್ತನು ಮಾತ್ರವಲ್ಲದೆ ಆತುರವುಳ್ಳವನಾಗಿದ್ದಾನೆ. ನಮ್ಮ ಗೋಣಿತಟ್ಟನ್ನು ತೆಗೆದುಬಿಟ್ಟು

ಹರ್ಷವಸ್ತ್ರವನ್ನು ನಮಗೆ ಧಾರಣೆಮಾಡಿಸುವನು. (ಕೀರ್ತನೆಗಳು 30:11,12). ದೇವರು ಅದನ್ನು ಮಾಡಲು ಶಕ್ತನು ಆತನ ವಾಕ್ಯದಲ್ಲಿ ವಿಶ್ವಾಸವಿಡಿರಿ. ನಿಮ್ಮ ಜೀವನದಲ್ಲಿ 'ಕ್ಲುಪ್ತ ಕಾಲವು' ಬಂದಾಗ, ದೇವರು ನಿಮ್ಮನ್ನು ಕರುಣಿಸದೆ ಇರನು. ಆದರೆ ಆ ಕಾಲವು ಬರುವವರೆಗೆ ನಾವು ನಿರಾಶೆಗೊಳ್ಳಗೆ ಶಾಂತರಾಗಿ ಕಾದಿರಬೇಕಾಗಿದೆ. ಇನ್ನೊಂದೆಡೆ ಪ್ರಕಾಶಮಾನವಾಗಿದೆ ಎಂದು ಯೋಚಿಸಿ ಒಂದು ಕಷ್ಟದ ಸನ್ನಿವೇಶದಿಂದ ಓಡಿಹೋಗುವ ತಪ್ಪನ್ನು ಮಾಡಬೇಡಿರಿ, ದೇವರ ಕಾಲಕ್ಕಾಗಿ ಕಾದಿರಿ, ದೇವರಿಗಿಂತ ಮುಂದಾಗಿ ಓಡಬೇಡಿರಿ. ನಿಮ್ಮ ಪಾಠವನ್ನು ಬೇಗನೆ ಕಲಿತು ದೇವರ ದಯೆಯು ನಿಮಗೆ ತಲುಪಲು ಬಿಡಿರಿ. ನಿಮಗೆ ದಯೆ ತೋರಿಸುವ ಕಾಲವು ಬರುವುದು!

> ಸತ್ಯವೇದದ ದೇವರು ನಿಮ್ಮ ಹೋರಾಟಗಳ
> ಜ್ಞಾಪಕವನ್ನು ಕೂಡ ಅಳಿಸಿ ಬಿಡುವ ವಾಗ್ದಾನ
> ಮಾಡಿದ್ದಾನೆಂದು ಧೈರ್ಯದಿಂದಿರಿ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

## ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

''**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು**'' (ಅಪೊಸ್ತಲರ ಕೃತ್ಯ 10:43)

''**ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ**'' (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ನಮ್ಮ ಜೀವನದ ಪ್ರತಿಯೊಂದು ಹಂತಗಳಲ್ಲೂ, ನಾವು ಜೀವನದ ವಿವಿಧ ಸಮಯಗಳನ್ನು ನಾವೆಲ್ಲರೂ ಅನುಭವಿಸುತ್ತೇವೆ. ಇವುಗಳ ಮಧ್ಯದಲ್ಲಿ ನಾವು, ರಾತ್ರಿಯ ಸಮಯಗಳೆಂಬುದಾಗಿ ಕರೆಯುವ ಅದ್ಭುತಕರವಾದ ನಮ್ಮ ಜೀವನದ ಸಮಯಗಳನ್ನು ನಾವು ದಾಟಿ ಹೋಗುತ್ತೇವೆ. ನಾವು ಪ್ರಯತ್ನಿಸಿ ‘‘ರಾತ್ರಿಯ ಸಮಯಗಳನ್ನು’’ ಅರ್ಥ ಮಾಡಿಕೊಂಡಾಗ, ರಾತ್ರಿಯ ಸಮಯಗಳುಂಟಾಗಲು ಕಾರಣಗಳೇನು ಎಂಬುದರ ಕುರಿತ ಅನೇಕ ಪ್ರಶ್ನೆಗಳಿಗೆ ಉತ್ತರಗಳು ಅವಶ್ಯಕ ಎಂಬುದನ್ನು ನಾವು ಗ್ರಹಿಸುತ್ತೇವೆ. ಇದು ಹೇಗೆ ಸಂಭವಿಸುತ್ತದೆ? ಯಾಕೆ ರಾತ್ರಿಯು ಬರುತ್ತದೆ? ಕಾರ್ಗತ್ತಲೆಯ ಮಧ್ಯದಲ್ಲಿ ನಾನು ಮಾಡಬೇಕಾದುದೇನು? ಯಾವಾಗ ಬೆಳಿಗ್ಗೆ ಉದಯಿಸುತ್ತದೆ?

ಈ ಪುಸ್ತಕವು ಇಂತಹ ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ ಮತ್ತು ಕ್ರಿಸ್ತನಲ್ಲಿ ನಾವು ಇಟ್ಟಂತಹ ನೀರಿಕ್ಷೆಯಿಂದು - ಕಠಿಣ ಪರಿಸ್ಥಿತಿಗಳ ಮಧ್ಯದಲ್ಲೂ ಒಳ್ಳೆಯ ಆಲೋಚನೆಗಳನ್ನು ನಾವು ಹೊಂದಿರಬೇಕು ಎಂಬುದಾಗಿ ಪ್ರೋತ್ಸಾಹಿಸುತ್ತದೆ. ದುಖಃವು ರಾತ್ರಿಯಲ್ಲಿ ಕೊನೆಯಾಗುತ್ತದೆ. ಆದರೆ ಬೆಳಿಗ್ಗೆಯಲ್ಲಿ ಸಂತೋಷವು ಬರುತ್ತದೆ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org